ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀವೇದವ್ಯಾಸಾಭಿನ್ನಶ್ರೀಲಕ್ಷ್ಮೀಹಯಗ್ರೀವಾಯನಮಃ
ಮೈಸೂರು ಪಿರಿಯಾಪಟ್ಟಣತಾಲ್ಲೂಕು ಬೆಮ್ಮತ್ತಿ ಗ್ರಾಮದಲ್ಲಿರುವ
ಶ್ರೀ॥ಮ॥ಶಾ॥ ಸಂ॥ಶ್ರೀಸೀತಾರಾಮಾಚಾರ್ಯರು ಬರೆದಿದ್ದು ನನಗೆ ಆಶೀರ್ವಾದ ಮಾಡಿ ಕೊಟ್ಟಿರುವ
ಬರವಣಿಗೆಗಳು.

1. ದ್ವೈತಸಿದ್ಧಾಂತದ ಅಪೂರ್ವತೆ.

ಪ್ರಕೃತ ತಮ್ಮ ತಾತ್ತ್ವಿಕ ಜಿಜ್ಞಾಸೆಗೆ ಮಂದಮತಿಯಾದ ನಾನು ಯಥಾಮತಿ ಉತ್ತರಿಸಲು ಉದ್ಯುಕ್ತನಾಗುತ್ತಿದ್ದೇನೆ. ಗುರುಗಳ(ಪೇಜಾವರ ಮಠದ ಶ್ರೀವಿಶ್ವೇಶತೀರ್ಥರು) ಮೇಲಿನ ಗೌರವದ ಬಲದಿಂದ ಬರೆದ ಈ ಬರವಣಿಗೆಯಲ್ಲಿ ಗುಣಗಳು ಗೋಚರವಾದರೆ ಅವು ಗುರುಗಳದೇ ಸೊತ್ತು. ನನ್ನ ಸ್ವಂತದ್ದಾದ ಲೋಪದೋಷಗಳನ್ನು ತಮ್ಮ ಸಹೃದಯತೆ ಕ್ಷಮಿಸುತ್ತದಲ್ಲವೇ
(ಹೀಗೆಂದು ನನ್ನ ಗುರುಗಳು ತಮ್ಮ ಹಿರಿಯರನ್ನು ಕುರಿತು ಬರೆದ ಬರವಣಿಗೆಯ ಪ್ರತಿಯೇ ಇದು)

ಶ್ರೀಮದಾನಂದತೀರ್ಥರು ಸ್ಥಾಪಿಸಿದ ತತ್ವವಾದವು ದ್ವೈತಸಿದ್ಧಾಂತವೆಂಬ ಹೆಸರಿನಿಂದಲೇ ಪ್ರಸಿದ್ಧವಾಗಿದೆ. ದ್ವೈತವೆಂದರೆ ಭೇದ. ದ್ವೈತಸಿದ್ಧಾಂತ ಭೇದಸಿದ್ಧಾಂತ ಇವು ಪರ್ಯಾಯಪದಗಳು. ಈ ಭೇದವನ್ನು ಮುಖ್ಯವಾಗಿ ಐದು ಬಗೆಯಾಗಿ ಶ್ರೀಮದಾಚಾರ್ಯರು ವಿಂಗಡಿಸಿದ್ದಾರೆ. 1. ಜೀವರಲ್ಲಿ ಪರಸ್ಪರಭೇದ; 2.ಜಡವಸ್ತುಗಳಲ್ಲಿ ಭೇದ ; 3. ಜಡಜೀವರುಗಳಲ್ಲಿ ಭೇದ; 4. ಜೀವಪರಮಾತ್ಮರಲ್ಲಿ ಭೇದ ; 5. ಜಡಪರಮಾತ್ಮರಲ್ಲಿ ಭೇದ. ಈ ಬಗೆಯಾದ ಪಂಚಭೇದವು ನಮ್ಮ ಸಿದ್ಧಾಂತದ ಪ್ರಮುಖ ಪ್ರಮೇಯಗಳಲ್ಲಿ ಒಂದಾಗಿದೆ. ಅನಂತ ವೇದ, ವೇದಾಂತಶಾಸ್ತ್ರಗಳು ಈ ಪಂಚಭೇದಪ್ರಮೇಯವನ್ನು ಪ್ರಧಾನವಾಗಿ ಪ್ರತಿಪಾದಿಸುತ್ತವೆಂದು ಶ್ರೀಮಧ್ವಾಚಾರ್ಯರು ತಮ್ಮ ಗ್ರಂಥಗಳಲ್ಲಿ ವಿಶೇಷವಾಗಿ ವಿಶದವಾಗಿ ನಿರೂಪಿಸಿದ್ದಾರೆ. ಈ ಪಂಚಭೇದವೆಂಬ ಪ್ರಸಿದ್ಧಪ್ರಮೇಯದ ಬಗ್ಗೆ ಪ್ರತಿವಾದಿಗಳಾದ ಅದ್ವೈತಿಗಳು ಪ್ರಬಲವಾದ ಪ್ರತಿವಾದವನ್ನು ಪ್ರತಿಪಾದಿಸುತ್ತಾರೆ. ಒಂದು ಸಿದ್ಧಾಂತವು ಸತ್ತತ್ತ್ವಜಿಜ್ಞಾಸುಗಳಾದ ಪ್ರಾಮಾಣಿಕಜನರಿಂದ ಮನ್ನಣೆ ಪಡೆಯಬೇಕಾದರೆ, ಆ ಸಿದ್ಧಾಂತದಲ್ಲಿ ಪ್ರತಿಪಾದಿಸುವ ವಿಷಯವು ಅಪೂರ್ವವಾಗಿರಬೇಕು. ಆ ಅಪೂರ್ವವಿಷಯವನ್ನು ತಿಳಿಯುವುದರಿಂದ ಮಹತ್ತರಪ್ರಯೋಜನವು ದೊರೆಯಬೇಕು. ಇಲ್ಲದಿದ್ದರೆ ಎಲ್ಲರಿಗೂ ಆ ಗ್ರಂಥವು ವ್ಯರ್ಥವೆನಿಸುವುದರಿಂದ, ಅಂತಹ ಗ್ರಂಥವನ್ನು ರಚಿಸಿದವನೊಬ್ಬನೇ ತನ್ನ ಗ್ರಂಥವನ್ನು ತನ್ನ ತಲೆಯ ಮೇಲಿಟ್ಟುಕೊಳ್ಳಬೇಕು. ಪ್ರಬಲವಾದ ಈ ಆಪಾದನೆಯು ದ್ವೈತ(ಭೇದ)ವಾದಿಗಳಿಗೆ ಪೂರ್ತಿಯಾಗಿ ಸಂಭವಿಸುತ್ತದೆ. ದ್ವೈತಸಿದ್ಧಾಂತವು ಪಂಚವಿಧಭೇದವಿಷಯವನ್ನು ಪ್ರತಿಪಾದಿಸುತ್ತದೆಯಲ್ಲವೇ. ಅಖಂಡಭೂಮಂಡಲದಲ್ಲೇ ಯಾವ ಜೀವಿಯೂ ಕೂಡ ಈ ಭೇದವನ್ನು ಅನುಭವಿಸದಿರಲು ಸಾಧ್ಯವಿಲ್ಲ. ಹೀಗೆ ಯಾವ ಜೀವಿಗೂ ಅಪೂರ್ವವೆನಿಸದ ಭೇದಕ್ಕೆ ಅಪೂರ್ವತೆಯೆಂಬ ವೈಶಿಷ್ಟ್ಯವಿಲ್ಲ. ಇದರ ವಿವರವನ್ನು ಹೀಗೆ ಅರಿಯಬಹುದು. ಪ್ರತಿಯೊಬ್ಬನೂ ಎಲ್ಲ ವಿಷಯವನ್ನೂ ಪ್ರತ್ಯೇಕಪ್ರತ್ಯೇಕವಾಗಿಯೇ (ಬೇರೆಬೇರೆಯಾಗಿಯೇ) ಅರಿಯುತ್ತಾನೆ. ಕಣ್ಣಿಗೆ ಕಾಣುವ ಜಡವಸ್ತುಗಳೆಲ್ಲವನ್ನೂ ಬೇರೆಬೇರೆಯಾಗಿಯೇ ಅರಿಯುತ್ತಾನೆ. ಈ ವಿಶಾಲವಿಶ್ವಕ್ಕೆ ಈಶನಾದವನನ್ನು ಶ್ರೀಶನೆಂದು ಪರಮಾತ್ಮನ ಪರಿಚಯವನ್ನು ಪಡೆಯುವ ಕ್ಷಣದಲ್ಲೇ ಆ ಪರಮಾತ್ಮನು ಈ ಪ್ರಪಂಚಕ್ಕಿಂತ ಬೇರೆಯಾಗಿರುವನೆಂದೇ ತಿಳಿಯುತ್ತಾನೆ. ಪ್ರತಿಯೊಬ್ಬ ಜೀವಿಗೂ ಪ್ರತಿಹೆಜ್ಜೆಗೂ ಪ್ರತ್ಯಕ್ಷದಿಂದ ಪ್ರಪಂಚಸಿದ್ಧವಾದ ಈ ಭೇದವಾದರೂ ಯಾವ ದೊಡ್ಡ ದಡ್ಡನಿಗೂ ಅಪೂರ್ವವೆಂದೆನಿಸುವುದಿಲ್ಲ. ಎರಡನೆಯದಾಗಿ ಈ ಭೇದದ ಜ್ಞಾನದಿಂದ ಬಿಡಿಗಾಸಿನಷ್ಟೂ ಪ್ರಯೋಜನವಿಲ್ಲ. ಏಕೆಂದರೆ ನಿರಂತರವಾಗಿ ಭೇದದ ಅರಿವಿರುವ ಅಸಂಖ್ಯಜೀವರೆಲ್ಲರಿಗೆ ದೊರೆತಿರುವ ಮಹಾಪ್ರಯೋಜನ ವಾದರೂ ಯಾವುದದು? ಹೀಗೆ ಅಪೂರ್ವತೆಯೆಂಬ ಗುಣವಿಲ್ಲದ ಮತ್ತು ಮಹತ್ತರಪ್ರಯೋಜನವಿಲ್ಲದ ಶುಷ್ಕಭೇಧವನ್ನು ವಿಶೇಷವಾಗಿ ಘೋಷಿಸುವ ದ್ವೈತಸಿದ್ಧಾಂತವೇ ವ್ಯರ್ಥವೆಂದು ಅದ್ವೈತವಾದಿಗಳು ದೂಷಿಸುತ್ತಾರೆ.

ನಂತರ ತಮ್ಮದಾದ ಅದ್ವೈತವಾದವನ್ನು ಅಂದರೆ ಅಭೇದವಾದವನ್ನು ಹೀಗೆ ಸಮರ್ಥಿಸುತ್ತಾರೆ. ಹಿಂದೆ ಪ್ರತಿಪಾದಿಸಿದಂತೆ ಭೇದದ ಬಗ್ಗೆ ಬಗೆಬಗೆಯಸಮಸ್ಯೆಗಳು ಸಂಭವಿಸುವಂತೆ ಅಭೇದದ ಬಗ್ಗೆ ಈ ಬಗೆಯ ದೋಷಗಳು ಸಂಭವಿಸುವುದಿಲ್ಲ. ಅಭೇದವೆಂದರೆ, ಪರಸ್ಪರಜೀವಾತ್ಮರಿಗೆ ಹಾಗೂ ಜೀವಾತ್ಮ, ಪರಮಾತ್ಮರಿಗೆ ಭೇದವೇ ಇಲ್ಲದಿರುವಿಕೆ. ಈ ಅಭೇದವು ಯಾರ ಪ್ರತ್ಯಕ್ಷದಿಂದಲೂ ಸಿದ್ಧವಾಗಲು ಸಾಧ್ಯವಿಲ್ಲ. ಹೀಗೆ ಯಾವ ಜೀವಾತ್ಮನಿಗೂ ಅಭೇದವು ಪೂರ್ವಸಿದ್ಧವಲ್ಲದ್ದರಿಂದ ಈ ಅಭೇದಕ್ಕೆ ಅಪೂರ್ವತೆಯೆಂಬ ವೈಶಿಷ್ಟ್ಯವಿದೆ. ಹಾಗೂ ಅಪೂರ್ವವಾದ ಈ ಅಭೇದದ ವಿಶೇಷಜ್ಞಾನದಿಂದ ನಿರ್ವಿಶೇಷನಾದ ಪರಮಾತ್ಮನೇ

ಆಗುವಂತಹ ಪರಮಶ್ರೇಷ್ಠ ಪ್ರಯೋಜನವಿದೆ. ಹೀಗೆ ಅತ್ಯಪೂರ್ವವಿಷಯ, ಪರಮಶ್ರೇಷ್ಠ ಪ್ರಯೋಜನಗಳುಳ್ಳ ಅಭೇದವನ್ನು ಪ್ರತಿಪಾದಿಸುವ ವೇದವೇದಾಂತಗ್ರಂಥಗಳು ಮಹನೀಯರೆಲ್ಲರ ಪೂರ್ಣಮನ್ನಣೆಗೆ ಪಾತ್ರವಾಗುತ್ತವೆ. ಈ ಅಭೇದ (ಅದ್ವೈತ)ತತ್ತ್ವವನ್ನು ಪರಮಪ್ರಮಾಣವಾದ ವೇದವೇದಾಂತ ಗ್ರಂಥಗಳು ಪ್ರಧಾನವಾಗಿಯೇ ಪ್ರತಿಪಾದಿಸುತ್ತವೆ. ''ಅಹಂ ಬ್ರಹ್ಮಾಸ್ಮಿ '' (ನಾನು ಪರಬ್ರಹ್ಮನೇ ಆಗಿದ್ದೇನೆ); ''ಬ್ರಹ್ಮೈವೇದಂ ಸರ್ವಮ್'' (ಚೇತನ, ಅಚೇತನಾತ್ಮಕವಾದ ಪ್ರಪಂಚವೆಲ್ಲವೂ ಪರಬ್ರಹ್ಮನ ಸ್ವರೂಪವೇ ಆಗಿದೆ); ''ಏಕಮೇವಾದ್ವಿತೀಯಂ ಬ್ರಹ್ಮ'' (ಎರಡನೆಯ ವಸ್ತುವೇ ಇಲ್ಲದ ಪರಮಾತ್ಮನು ಸತ್ಯ); ''ಬ್ರಹ್ಮವಿದ್ ಬ್ರಹ್ಮೈವ ಭವತಿ '' ಪರಮಾತ್ಮನ ಸ್ವರೂಪವನ್ನು ತಿಳಿದ ಜೀವಾತ್ಮನು ಸಾಕ್ಷಾತ್ ಪರಮಾತ್ಮ ಸ್ವರೂಪನೇ ಆಗುತ್ತಾನೆ.) ಮುಂತಾದ ಮಹಾ ವೇದವಾಕ್ಯಗಳಿಂದ ಅಭೇದಜ್ಞಾನವನ್ನು ಪಡೆಯಬೇಕು. ಪರಮಾತ್ಮನೊಬ್ಬನೇ ಸತ್ಯವಾದರೆ, ಪರಮಾತ್ಮನಿಗಿಂತ ಪ್ರತ್ಯೇಕವಾಗಿ ಪ್ರತ್ಯಕ್ಷದಿಂದ ಪ್ರತಿ ಹೆಜ್ಜೆಹೆಜ್ಜೆಗೂ ಸತ್ಯವೆಂದು ಪ್ರಸಿದ್ಧವಾದ ಈ ಪಾಂಚಭೌತಿಕಪ್ರಪಂಚಕ್ಕೆ ಏನು ಗತಿ? ಎಂಬ ಪ್ರಶ್ನೆಗೆ ''ಅಧೋಗತಿ'' ಎಂದು ಉತ್ತರಿಸುತ್ತಾರೆ. ನಿತ್ಯವೂ ನಾವೆಲ್ಲರೂ ಕನಸಿನಕಾಲದಲ್ಲಿ ಬಗೆಬಗೆಯವಸ್ತುಗಳನ್ನು ಅನೇಕ ಲೋಕಗಳನ್ನು ಸತ್ಯವೆಂದೇ ಕಾಣುತ್ತೇವೆ. ಎಚ್ಚರವಾದಾಗ ಇಷ್ಟು ತಾನು ಕಂಡ ಸ್ವಪ್ನಪ್ರಪಂಚ ಶುದ್ಧಸುಳ್ಳೆಂದು ತಿಳಿಯುತ್ತೇವಲ್ಲವೇ? ಅಂತೆಯೇ ಅದ್ವೈತ(ಜೀವಾತ್ಮ, ಪರಮಾತ್ಮರ ಅಭೇದದ) ಸಾಕ್ಷಾತ್ಕಾರವೆಂಬ ಎಚ್ಚರವನ್ನು ಪಡೆದ ಕೂಡಲೇ ಈ ವಿಶಾಲವಿಶ್ವವೆಲ್ಲವೂ ಶೂನ್ಯವಾಗಿ ಬಿಡುತ್ತದೆ. ಆಗ ಉಳಿಯುವುದು ಸತ್ಯನಾದ ಪರಮಾತ್ಮಸ್ವರೂಪನಾದ ತಾನೊಬ್ಬನೇ. ಹೀಗೆ ಪರಮಾತ್ಮನೊಬ್ಬನ ಹೊರತು ಅಜ್ಞಾನದ ಪರಿಣಾಮರೂಪವಾದ ಪ್ರಪಂಚವೆಲ್ಲವೂ ಸ್ವಪ್ನಪ್ರಪಂಚದಂತೆಯೇ ಶುದ್ಧಸುಳ್ಳು. ಸುಪ್ರಸಿದ್ಧವಾದ ಭೇದಜ್ಞಾನವೂ ಸುದೀರ್ಘಕಾಲದ ಭ್ರಾಂತಿಯೇ ಹೊರತು ಯಥಾರ್ಥವಲ್ಲ. ಇದಕ್ಕೊಂದು ನಿದರ್ಶನವನ್ನು ಪ್ರದರ್ಶಿಸುತ್ತಾರೆ. ''ಭೇದೋ ಮಿಥ್ಯಾ ಭೇದತ್ವಾತ್ । ಚಂದ್ರಭೇದವತ್॥'' ಬೆರಳಿನಿಂದ ಒಂದು ಕಣ್ಣಿನ ರೆಪ್ಪೆಯನ್ನು ಸ್ವಲ್ಪ ಒತ್ತಿ ಚಂದ್ರನನ್ನು ನೋಡಿದಾಗ ಒಬ್ಬನೇ ಚಂದ್ರನು ಎರಡಾಗಿ ಕಾಣಿಸುತ್ತಾನೆ. ಹೀಗೆ ದೃಷ್ಟಿದೋಷದಿಂದ ಕಾಣಿಸುವ ಎರಡನೆಯ ಸುಳ್ಳು ಚಂದ್ರನಲ್ಲಿ ಸತ್ಯನಾದ ಚಂದ್ರನ ಭೇದ ಕಾಣಿಸುತ್ತದೆ. ಈ ಚಂದ್ರಭೇದ ಸುಳ್ಳಲ್ಲವೇ? ಎರಡನೇ ಚಂದ್ರನೇ ಇಲ್ಲದಿರುವಾಗ ಭ್ರಮೆಯಿಂದ ತೋರುವ ಎರಡನೇ ಚಂದ್ರನಲ್ಲಿ ಸತ್ಯಚಂದ್ರನ ಭೇದ ಹೇಗೆ ಇರಲು ಸಾಧ್ಯ? ಹೀಗೆಯೇ ಬೆರಳಿನಿಂದ ಕಣ್ಣಿನ ರೆಪ್ಪೆಯೊಂದನ್ನು ಒತ್ತಿ ಎದುರಿಗಿರುವ ವಸ್ತುಗಳನ್ನು ನೋಡುವಾಗ ಆ ವಸ್ತುಗಳೆಲ್ಲವೂ ಎರಡೆರಡಾಗಿ ಗೋಚರಿಸುತ್ತವೆ. ಆಗ ಎದುರಿಗಿರುವ ವಸ್ತುಗಳ ಭೇದವು, ಭ್ರಮೆಯಿಂದ ತೋರುವ ಎರಡನೇ ವಸ್ತುಗಳಲ್ಲಿ ವಾಸ್ತವವಾಗಲು ಸಾಧ್ಯವೇ? ಅಂತೆಯೇ ಅಜ್ಞಾನದ ಪರಿಣಾಮರೂಪವಾದ ಈ ಪಾಂಚಭೌತಿಕ ಪ್ರಪಂಚವೆಲ್ಲವೂ ಶುದ್ಧ ಸುಳ್ಳು, ಸುಳ್ಳಾದ ವಸ್ತುಗಳಲ್ಲಿ ತೋರುವ ಭೇದ ವಾಸ್ತವವಾಗಲು ಹೇಗೆ ತಾನೇ ಸಾಧ್ಯ? ಆದ್ದರಿಂದ ಭೇದ(ದ್ವೈತ)ವಾದಿಗಳು ವಾದಿಸುವ ಪಂಚವಿಧಭೇದವು ಶುದ್ಧಾಂಗ ಸುಳ್ಳು, ಆದ್ದರಿಂದ ತತ್ತ್ವಜಿಜ್ಞಾಸುಗಳಾದ ಜೀವಾತ್ಮರೆಲ್ಲರೂ ನಿತ್ಯಸತ್ಯವಾದ ಅಭೇದತತ್ತ್ವದ ಜ್ಞಾನವನ್ನು ಶಾಸ್ತ್ರಗಳಿಂದ ಪಡೆಯಬೇಕು. ಹೇಗೆ ವಿಷ್ಣುವಿನ ಅಂಶಗಳಾದ ರಾಮ, ಪರಶುರಾಮಾದಿ ರೂಪಗಳಿಗೆ ಪರಸ್ಪರ ಭೇದವೇ ಇಲ್ಲವೋ ಅಂತೆಯೇ ವಿಷ್ಣುವಿನ ಅಂಶರೇ ಆಗಿರುವ ಎಲ್ಲ ಜೀವಾತ್ಮರಿಗೂ ಪರಮಾತ್ಮನಿಗೂ ಪರಸ್ಪರ ಭೇದವೇ ಇಲ್ಲ. ಜೀವಾತ್ಮರೆಲ್ಲರೂ ತನ್ನದೇ ಅಂಶರಾಗಿರುವರೆಂಬ ವಿಷಯವನ್ನು ''ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ''ಎಂದು ಶ್ರೀಕೃಷ್ಣನೇ ಭಗವದ್ ಗೀತೆಯಲ್ಲಿ ಘೋಷಿಸಿದ್ದಾನೆ. ಹೀಗೆ ಅಭೇದಸಿದ್ಧಾಂತವೇ ಶ್ರುತಿಸ್ಮೃತಿಪ್ರಮಾಣಗಳಿಂದ ಪ್ರಮಿತವಾಗಿದ್ದರಿಂದ ಈ ಅದ್ವೈತಸಿದ್ಧಾಂತವೇ ಪರಮಶ್ರೇಷ್ಠವೆಂದು ಸಿದ್ಧವಾಗುತ್ತದೆಂದು ಅದ್ವೈತಿಗಳ ನಿಲುವು.

ಹೀಗೆ ದಿಗ್ದಂತಿಪಂಡಿತರನ್ನೇ ದಿಗ್ಭ್ರಮೆಗೊಳಿಸುವ ಮಾಯಾವಿಗಳಾದ ಮಾಯಾವಾದಿಗಳ ಮಾಯಾವಾದಕ್ಕೆ ಯಾವ ಮಾನವ ತಾನೇ ಮೋಹಗೊಳ್ಳದಿರಲು ಸಾಧ್ಯ? ಮೊದಲನೆಯದಾಗಿ, ಪ್ರತಿಯೊಬ್ಬರ ಪ್ರತ್ಯಕ್ಷದಿಂದಲೇ ಪ್ರಪಂಚಪ್ರಸಿದ್ಧವಾದ ಭೇದವನ್ನು ಸಾಧಿಸುವುದು ಬಹಳ ಸುಲಭವೆಂದು ಅದ್ವೈತವಾದಿಗಳ ಬಲಿಷ್ಠ ಆಕ್ಷೇಪಕ್ಕೆ ಉತ್ತರ ರೂಪವಾಗಿರುವ, ಸುಮಧ್ವವಿಜಯದಲ್ಲಿ ಸೂಚಿಸಿರುವ ಪ್ರಸಂಗವೊಂದನ್ನು ಸ್ಮರಿಸುತ್ತಿದ್ದೇನೆ.

''ಕದಾಚಿದತ್ರೋಪಯಯೌ ಯತಿಃ ಸಖಾ ಗೋವಿಂದಬುದ್ಧೇ ಬಹುಶಿಷ್ಯಸಂವೃತಃ ।
ಅಮುಷ್ಯ ಶಿಷ್ಯಾ ಅನುಮಾನಾಶಿಕ್ಷಿತಾಸ್ತದಾಽಜಿಗೀಷನ್ ಗುರುಬುದ್ಧಿಮುದ್ಧತಾಃ ॥
ಭಿದಾ ಸುಸಾಧ್ಯೇತ್ಯನುಮಾನಮತ್ರ ತೈಃ ಪಾಯುಜ್ಯತಾಶು ಪ್ರತಿಪಕ್ಷಭೀಷಣಮ್ ।
ಅಖಂಡಯದ್ ವ್ಯಕ್ತಮಖಂಡಧೀರಿದಂ ಸ ಪಕ್ಷದಕ್ಷಃ ಫಣಿನಂ ವಿರಾಡಿವ ॥''

ಒಮ್ಮೆ ಶ್ರೀಅಚ್ಯುತಪ್ರೇಕ್ಷಾಚಾರ್ಯರ ಮಿತ್ರರಾದ 'ಗೋವಿಂದಬುದ್ಧಿ' ಎಂಬ ಹೆಸರಿನ ಯತಿಗಳೊಬ್ಬರು ತಮ್ಮ ಅನೇಕ

ಪ್ರೌಢಶಿಷ್ಯರೊಡನೆ ಅಚ್ಯುತಪ್ರೇಕ್ಷರನ್ನು ಭೇಟಿಯಾಗಲು ಬಂದರು. ಆ ಗೋವಿಂದಬುದ್ಧಿಗಳ ದಕ್ಷಶಿಕ್ಷಣದಿಂದ ಅವರ ಶಿಷ್ಯರೆಲ್ಲರೂ ಕಠಿಣವಾದ ತರ್ಕಶಾಸ್ತ್ರದಲ್ಲಿ ಪ್ರಕಾಂಡಪಾಂಡಿತ್ಯವನ್ನು ಪಡೆದಿದ್ದರು. ಈ ಪಾಂಡಿತ್ಯದ ಪ್ರೌಢಿಮೆಯಿಂದ ಆ ಪ್ರೌಢಶಿಷ್ಯರು ವಿಶಿಷ್ಟಗರ್ವಿಷ್ಠರಾಗಿದ್ದರು. ಆದ್ದರಿಂದ ಅವರೆಲ್ಲರೂ ಒಂದುಗೂಡಿ ಅಚ್ಯುತ ಪ್ರೇಕ್ಷರ ಶಿಷ್ಯನಾದ ಆನಂದತೀರ್ಥರೆಂಬ ಬಾಲಯತಿಯನ್ನು ತಮ್ಮ ಘನಪಾಂಡಿತ್ಯದಿಂದ ಲೀಲಾಜಾಲವಾಗಿ ಸೋಲಿಸಿ ಬೆರಗುಗೊಳಿಸಬೇಕೆಂದು ಬಯಸಿದರು. ಅವರೆಲ್ಲರೂ ಆನಂದತೀರ್ಥರಿಗೆ ಹೇಳುತ್ತಾರೆ. ''ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಕ್ಷಣದಲ್ಲಿ ತಮ್ಮ ತಮ್ಮ ಪ್ರತ್ಯಕ್ಷದಿಂದ ಭೇದವನ್ನು ಸುಸ್ಪಷ್ಟವಾಗಿ ತಿಳಿಯುತ್ತಾನೆ. ಇಂತಹ ಭೇದವನ್ನು ಸಾಧಿಸುವುದು ಬಹಳ ಬಹಳ ಸುಲಭ' ಎಂದು.

ಆಗ ಸಂಪೂರ್ಣಶರೀರಲಕ್ಷಣಗಳಿಂದ ಪರಿಪೂರ್ಣರಾಗಿ ಸರ್ವಾಂಗಸುಂದರರಾದ ಚಿಕ್ಕ ಬಾಲಕರಾದ ಶ್ರೀಮದಾನಂದ ತೀರ್ಥರು, ಉದ್ಧಟರಾದ ಆ ಪ್ರಚಂಡಪಂಡಿತಮಂಡಲಿಯನ್ನು ಕುರಿತು ಧೈರ್ಯಗಾಂಭೀರ್ಯದಿಂದಲೇ ಹೀಗೆ ಸವಾಲೆಸೆಯುತ್ತಾರೆ. ಹಾಗಾದರೆ ನೀವೆಲ್ಲರೂ ಸೇರಿ ಬಹುಸುಲಭಸಾಧ್ಯವಾದ ಭೇದದ ಪಕ್ಷವನ್ನು ವಹಿಸಿರಿ. ನಾನು ಅದರ ವಿರುದ್ಧ ಪಕ್ಷವನ್ನು ವಹಿಸುತ್ತೇನೆ. ನಮ್ಮ ಅಗಾಧಪಾಂಡಿತ್ಯದ ಪರಿಚಯವಿಲ್ಲದೇ ಈ ಚಿಕ್ಕಬಾಲಕ ಬಾಲಿಶವಾಗಿ ಸವಾಲೆಸೆಯುತ್ತಿದ್ದಾನೆ. ಈ ಬಾಲಯತಿ ನಮಗೆ ವಿರುದ್ಧವಾಗಿ ಹೇಗೆ ತಾನೆ ವಾದಿಸಲು ಸಾಧ್ಯ? ಎಂಬ ಭಾವನೆಯಿಂದ ಅವರೆಲ್ಲರೂ ಭೇದಸಾಧಕವಾದ ಪ್ರಬಲ ಅನುಮಾನವನ್ನು ಮಂಡಿಸುತ್ತಾರೆ। ''ಜೀವಪರಮಾತ್ಮನೌ ಪರಸ್ಪರಂ ಭಿನ್ನೌ ನಿಯಮ್ಯನಿಯಾಮಕತ್ವಾತ್। ರಾಜಭೃತ್ಯರಾಜವತ್॥'' ''ಜೀವ ಮತ್ತು ಪರಮಾತ್ಮರು, ಪರಸ್ಪರ ಭೇದವುಳ್ಳವರು, ಅವರಿಬ್ಬರಲ್ಲಿ ನಿಯಮ್ಯತ್ವ ನಿಯಾಮಕತ್ವಗಳೆಂಬ ವಿರುದ್ಧಧರ್ಮಗಳಿರುವುದರಿಂದ; ಉದಾ:- ರಾಜಭೃತ್ಯ, ಹಾಗೂ ರಾಜರಂತೆ.

ವಿವರಣೆ:-ಪರಮಾತ್ಮನು ಜೀವಾತ್ಮರೆಲ್ಲರಿಗೂ ನಿಯಾಮಕನಾಗಿದ್ದಾನೆ. ಆದ್ದರಿಂದ ಪರಮಾತ್ಮನಲ್ಲಿ ನಿಯಾಮಕತ್ವವೆಂಬ ಧರ್ಮವಿದೆ. ಜೀವಾತ್ಮರೆಲ್ಲರೂ ಪರಮಾತ್ಮನ ನಿಯಮಕ್ಕೆ ಒಳಪಟ್ಟವರು. ಆದ್ದರಿಂದ ಜೀವಾತ್ಮರಲ್ಲಿ ನಿಯಮ್ಯತ್ವವೆಂಬ ಧರ್ಮವಿದೆ. ಹೀಗೆ ಜೀವಾತ್ಮರಲ್ಲಿ ನಿಯಮ್ಯತ್ವ, ಪರಮಾತ್ಮನಲ್ಲಿ ನಿಯಾಮಕತ್ವ ಎಂಬ ವಿರುದ್ಧ ಧರ್ಮಗಳಿರುವುದರಿಂದ ಜೀವ, ಪರಮಾತ್ಮರು ಪರಸ್ಪರ ಭೇದವುಳ್ಳವರು. ಉದಾಹರಣೆ:- ರಾಜಸೇವಕರು ರಾಜನ ನಿಯಮಕ್ಕೆ ಒಳಪಟ್ಟಿದ್ದಾರೆ. ರಾಜನು ಆ ಸೇವಕರೆಲ್ಲರಿಗೂ ನಿಯಾಮಕ ನಾಗಿದ್ದಾನೆ. ಹೀಗೆ ರಾಜಸೇವಕರಲ್ಲಿ ನಿಯಮ್ಯತ್ವ, ರಾಜನಲ್ಲಿ ನಿಯಾಮಕತ್ವ ಎಂಬ ವಿರುದ್ಧಧರ್ಮಗಳಿರುವುದರಿಂದ ರಾಜಭೃತ್ಯ, ರಾಜಸೇವಕರು ಪರಸ್ಪರಭೇದವುಳ್ಳವರು. ಹೀಗೆ ಪರಸ್ಪರವಿರುದ್ಧಧರ್ಮಗಳುಳ್ಳ ವಸ್ತುಗಳು ಎಂದೆಂದೂ ಒಂದೇ ಆಗಲು ಸಾಧ್ಯವಿಲ್ಲ ವೆಂಬ ಯುಕ್ತಿಯಿಂದ, ಪರಸ್ಪರ ವಿರುದ್ಧಧರ್ಮವುಳ್ಳ ಜೀವ, ಪರಮಾತ್ಮನರಲ್ಲಿ ಪರಸ್ಪರಭೇದವು ಬಹುಸುಲಭವಾಗಿ ಸಿದ್ಧವಾಗುತ್ತದೆ. ಶ್ರೀಮನ್ನಾರಾಯಣಪಂಡಿತಾಚಾರ್ಯರು ಹೇಳಿದಂತೆ, ಬಹುಬಲಿಷ್ಠ ಗರುಡಪಕ್ಷಿಯು, ತನ್ನ ಉಜ್ವಲವಿಷಜ್ವಾಲೆಯಿಂದ ಎಲ್ಲ ಪ್ರಾಣಿಗಳ ಪ್ರಾಣ ಹಿಂಡುವ ಘೋರಸರ್ಪವನ್ನು ಬಹುಲೀಲೆಯಿಂದಲೇ ತುಂಡು ತುಂಡಾಗಿ ಖಂಡಿಸುವಂತೆ ಪರಿಪೂರ್ಣಪ್ರಜ್ಞೆಯುಳ್ಳ ಶ್ರೀಪೂರ್ಣಪ್ರಜ್ಞರು ಪ್ರಕಾಂಡಪಂಡಿತಮಂಡಲಿಯು ಮಂಡಿಸಿದ ಈ ಭೇದವಾದವನ್ನು ಬಹುಲೀಲೆಯಿಂದಲೇ ಖಂಡಿಸುತ್ತಾರೆ.

ಯಾವುದೇ ವಿಧಾನದಿಂದಲೂ ಭೇದವನ್ನು ಸಾಧಿಸಲು ಸಾಧ್ಯವಿಲ್ಲ. ಭೇದವಿದ್ದರೆ ಈ ಭೇದವನ್ನು ತಿಳಿಯುವ ಬಗೆ ಹೇಗೆ? 'ಜೀವ,ಪರಮಾತ್ಮರಲ್ಲಿ ಭೇದವಿದೆ' ಯೆಂದಾಗಲೀ, ಅಥವಾ 'ಜೀವನು ಪರಮಾತ್ಮನಿಗಿಂತ ಬೇರೆ' ಎಂದಾಗಲೀ ನಾವು ಭೇದವನ್ನು ತಿಳಿದುಕೊಳ್ಳಬೇಕು. ಭೇದವನ್ನು ತಿಳಿಯುವ ಮೊದಲು 'ಜೀವ,ಪರಮಾತ್ಮರಲ್ಲಿ ' ಎಂದು ಅವರನ್ನು ದ್ವಿವಚನದಿಂದ ಕರೆಯಲು ಹೇಗೆ ತಾನೇ ಸಾಧ್ಯ? ಆದ್ದರಿಂದ ಭೇದಸಿದ್ಧವಾದ ನಂತರವೇ 'ಜೀವ,ಪರಮಾತ್ಮರಲ್ಲಿ' ಎಂದು ವ್ಯವಹರಿಸಲು ಸಾಧ್ಯ. ಹೀಗೆಯೇ ಭೇದವನ್ನು ತಿಳಿಯುವುದಕ್ಕಿಂತ ಮೊದಲು 'ಜೀವನು ಪರಮಾತ್ಮನಿಗಿಂತ ಬೇರೆ' ಎಂದು ವ್ಯತ್ಯಾಸದಿಂದ ಕರೆಯಲು ಹೇಗೆ ತಾನೇ ಸಾಧ್ಯ? ಹೀಗೆ ಭೇದವನ್ನು ಮೊದಲು ತಿಳಿಯದಿದ್ದರೆ ಜೀವಪರಮಾತ್ಮರೆಂಬ ಎರಡು ವಸ್ತುಗಳನ್ನು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಭೇದದ ಜ್ಞಾನವುಂಟಾಗದೇ ಜೀವಪರಮಾತ್ಮರೆಂಬ ವಸ್ತುಗಳ ಜ್ಞಾನವುಂಟಾಗದೇ ಜೀವಪರಮಾತ್ಮರಲ್ಲಿ ಭೇದವಿದೆಯೆಂದು 'ಭೇಧಜ್ಞಾನವೇ' ಉಂಟಾಗಲು ಸಾಧ್ಯವಿಲ್ಲ. ಇದನ್ನು ''ಅನ್ಯೋನ್ಯಾಶ್ರಯ'' ದೋಷವೆಂದು ತಿಳಿಯಬೇಕು. ಉದಾಹರಣೆ:- ಮಗುವು ಔಷಧವನ್ನು ಕುಡಿಯದಿದ್ದರೆ ತಾಯಿ ಮಗುವಿಗೆ ಕಲ್ಲುಸಕ್ಕರೆಯನ್ನು ಕೊಡುವುದಿಲ್ಲ. ತಾಯಿಯು ಕಲ್ಲುಸಕ್ಕರೆಯನ್ನು ಮೊದಲು ಕೊಡದಿದ್ದರೆ ಮಗುವು ಔಷಧವನ್ನು ಕುಡಿಯಲಾರದು. ಹೀಗೆ ತಾಯಿ, ಮಗು ಇಬ್ಬರೂ ತಮ್ಮ ತಮ್ಮ ಹಠವನ್ನು ಬಿಡದ್ದಿದ್ದರೆ ಅನ್ಯೋನ್ಯಾಶ್ರಯವೆಂಬ ದೋಷದಿಂದ, ಮಗುವು ಔಷಧಕುಡಿಯಬೇಕೆಂಬ ಉದ್ದೇಶ ಸಿದ್ಧಿಸುವುದಿಲ್ಲ. ಅಂತೆಯೇ ಪ್ರಕೃತದಲ್ಲಿ ಭೇದಜ್ಞಾನವುಂಟಾಗಲು ಅನ್ಯೋನ್ಯಾಶ್ರಯದೋಷವು ಪ್ರತಿಬಂಧಕವಾದ್ದರಿಂದ ಉದ್ದೇಶವಾದ ಭೇದವು ಸಿದ್ಧವಾಗಲು ಸಾಧ್ಯವಿಲ್ಲ.

ಇಷ್ಟೇ ಅಲ್ಲದೇ 'ಅನವಸ್ಥಾ' ಎಂಬ ಮತ್ತೊಂದು ದೋಷವೂ ಸಂಭವಿಸುವುದರಿಂದ ಈ ಭೇದವು ಸಿದ್ಧಿಸಲು ಸಾಧ್ಯವಿಲ್ಲ.

‘ಅನವಸ್ಥಾ’ ಎಂಬ ದೋಷವೆಂದರೆ- ಒಂದಕ್ಕೊಂದು ಅಪ್ರಾಮಾಣಿಕವಾದ ಕಾರಣಗಳನ್ನು ಕೊನೆಯಿಲ್ಲದೇ ಕಲ್ಪಿಸುವುದು. ಉದಾಹರಣೆ- ಒಂದು ಮಗುವಿಗೆ ತನಗೇ ಏಳಲು ಸಾಮರ್ಥ್ಯವಿಲ್ಲ. ಅದನ್ನು ಎಬ್ಬಿಸಲು ಮತ್ತೊಂದು ಮಗುವನ್ನು ಕಲ್ಪಿಸಬೇಕು. ಆ ಮಗುವಿಗೂ ತನಗೇ ಏಳಲು ತ್ರಾಣವಿಲ್ಲದ್ದರಿಂದ ತನ್ನನ್ನು ಎಬ್ಬಿಸಲು ಮತ್ತೊಂದು ಮಗುವನ್ನು ಕಲ್ಪಿಸಬೇಕು. ಆ ಮಗುವನ್ನು ಎಬ್ಬಿಸಲು ಮತ್ತೊಂದು ಮಗುವನ್ನೂ, ಅದನ್ನು ಎಬ್ಬಿಸಲು ಮಗದೊಂದು ಮಗುವನ್ನೂ ಹೀಗೆ ಅಪ್ರಾಮಾಣಿಕವಾದ ಅನಂತ ಶಿಶುಗಳನ್ನು ಕಲ್ಪಿಸಿದರೂ ಮೊದಲಿನ ಮಗುವನ್ನು ಎಬ್ಬಿಸಬೇಕೆಂಬ ಉದ್ದೇಶವು ಸಿದ್ಧಿಸುವುದಿಲ್ಲ. ಆದ್ದರಿಂದ ಆ ಮಗುವನ್ನು ತಾಯಿಯು ಎಬ್ಬಿಸುತ್ತಾಳೆಂದು ಒಪ್ಪಿದರೆ, ಅನವಸ್ಥಾದೋಷಕ್ಕೆ ಅವಕಾಶವಿಲ್ಲದೇ ಉದ್ದೇಶ ಸಿದ್ಧವಾಗುತ್ತದೆ.

ಪ್ರಕೃತದಲ್ಲಿ ಭೇದವು ಸ್ವತಂತ್ರವಾಗಿ ಯಾರಿಗೂ ಗೋಚರಿಸುವುದಿಲ್ಲ. ಭೇದವು ಜೀವಪರಮಾತ್ಮರಿಗೆ ವಿಶೇಷಣವಾಗಿಯಾಗಲೀ ಅಥವಾ ವಿಶೇಷ್ಯವಾಗಿಯಾಗಲೀ ತೋರಬೇಕು. (1) ‘ಪರಸ್ಪರಭೇದವುಳ್ಳವರು ಜೀವಪರಮಾತ್ಮರು’ ಎಂಬ ಜ್ಞಾನದಲ್ಲಿ ಭೇದವು ವಿಶೇಷ್ಯರಾದ ಜೀವಪರಮಾತ್ಮರಿಗೆ ‘ವಿಶೇಷಣವಾಗಿಯೇ’ ತೋರುತ್ತದೆ. (2)‘ಜೀವ, ಪರಮಾತ್ಮರಲ್ಲಿ ಪರಸ್ಪರ ಭೇದವಿದೆ’ ಎಂಬ ಜ್ಞಾನದಲ್ಲಿ ಜೀವ, ಪರಮಾತ್ಮರು ವಿಶೇಷಣವಾಗಿಯೂ, ಭೇದವು ವಿಶೇಷ್ಯವಾಗಿಯೂ ತೋರುತ್ತವೆ. ನಾವೆಲ್ಲರೂ ವ್ಯವಹರಿಸುವಾಗಲೂ (ಅ)ಭಿನ್ನವಾದ (ಭೇದವುಳ್ಳ) ಕಂಬ, ಕುಂಭಗಳು’ ಎಂದಾಗಲೀ ; (ಆ)ಕಂಬ, ಕುಂಭಗಳಲ್ಲಿ ಭೇದವಿದೆ ಎಂದಾಗಲೀ, ಭೇದವನ್ನು ವಿಶೇಷಣರೂಪದಿಂದ ಅಥವಾ ವಿಶೇಷ್ಯರೂಪದಿಂದ ತಿಳಿಯುತ್ತೇವಲ್ಲವೇ. ಸ್ವತಂತ್ರವಾಗಿ ಪುಸ್ತಕ ಮುಂತಾದ ವಸ್ತುಗಳು ತೋರುವಂತೆ ವಸ್ತುವಿನ ಅಪೇಕ್ಷೆಯಿಲ್ಲದೇ ‘ಭೇದ’ ಎಂದಿಷ್ಟೇ ಸ್ವತಂತ್ರವಾಗಿ ಯಾರಿಗೂ ಭೇದದ ಜ್ಞಾನವು ಬರಲಾರದು. ಆದ್ದರಿಂದ ಭೇದವು ಭಾಸವಾಗುವುದಾದರೆ ಜೀವ, ಪರಮಾತ್ಮರಿಗೆ ವಿಶೇಷಣವಾಗಿ, ಅಥವಾ ವಿಶೇಷ್ಯವಾಗಿ ತೋರಬೇಕು. ಈ ವಿಶೇಷಣ,ವಿಶೇಷ್ಯವೆಂಬ ಸಂಬಂಧವನ್ನು ತಿಳಿಯುವುದಕ್ಕಿಂತ ಮೊದಲು ಭೇದಜ್ಞಾನವನ್ನು ಪಡೆದಿರಬೇಕು. ಉದಾಹರಣೆ:- ‘ದಂಡವುಳ್ಳವನು ದೇವದತ್ತ’ ಎಂದು ಜ್ಞಾನದಲ್ಲಿ ದಂಡವು ವಿಶೇಷಣವಾಗಿಯೂ ದೇವದತ್ತನು ವಿಶೇಷ್ಯವಾಗಿಯೂ ತೋರುತ್ತವೆ. ದಂಡವು ವಿಶೇಷಣವೆಂದೂ ದೇವದತ್ತನು ವಿಶೇಷ್ಯವೆಂದೂ ವ್ಯತ್ಯಾಸವನ್ನು, ಮೊದಲು ಭೇದಜ್ಞಾನವಿಲ್ಲದಿದ್ದರೆ ತಿಳಿಯಲು ಸಾಧ್ಯವಿಲ್ಲವಲ್ಲವೇ? ಅಂತೆಯೇ ವಿಶೇಷಣ, ಅಥವಾ ವಿಶೇಷ್ಯರೂಪದಿಂದ ತೋರುವ ಭೇದಕ್ಕೂ, ಜೀವ, ಪರಮಾತ್ಮರಿಗೂ ವಿಶೇಷಣ, ವಿಶೇಷ್ಯಭಾವವನ್ನು ತಿಳಿಯುವುದಕ್ಕಿಂತ ಮುಂಚೆ ಭೇದವನ್ನು ತಿಳಿದಿರಬೇಕು. ಆ ಭೇದವೂ ಕೂಡ ಸ್ವತಂತ್ರವಾಗಿ ತೋರಲು ಸಾಧ್ಯವಿಲ್ಲವಾದ್ದರಿಂದ, ಯಾವುದಾದರೂ ಎರಡು ವಸ್ತುಗಳಿಗೆ ವಿಶೇಷಣವಾಗಿ ಅಥವಾ ವಿಶೇಷ್ಯವಾಗಿ ತೋರಬೇಕು. ಆ ಜ್ಞಾನದಲ್ಲೂ ಭೇದ ಮತ್ತು ವಸ್ತುಗಳಿಗೆ ವಿಶೇಷಣ, ವಿಶೇಷ್ಯಭಾವವನ್ನು ತಿಳಿಯುವುದಕ್ಕಿಂತ ಮೊದಲು ಮತ್ತೊಂದು ಭೇದಜ್ಞಾನವನ್ನು ಪಡೆದಿರಬೇಕು. ಆ ಮತ್ತೊಂದು ಭೇದವೂ ಕೂಡ ಸ್ವತಂತ್ರವಾಗಿ ತೋರಲಾರದು. ಆದ್ದರಿಂದ ಆ ಭೇದವೂ ಯಾವುದಾದರೂ ಎರಡುವಸ್ತುಗಳಿಗೆ ವಿಶೇಷಣ ಅಥವಾ ವಿಶೇಷ್ಯಭಾವದಿಂದಲೇ ತೋರಬೇಕು. ಆ ವಿಶೇಷಣ, ವಿಶೇಷ್ಯಭಾವವನ್ನು ತಿಳಿಯುವ ಮುಂಚೆ ಇನ್ನೊಂದು ಭೇದದ ಜ್ಞಾನವಿರಬೇಕು. ಹೀಗೆಯೇ ಕೊನೆಯೇ ಇಲ್ಲದಂತೆ ಅಪ್ರಾಮಾಣಿಕವಾದ ಅನಂತಭೇದಗಳನ್ನು ಕಲ್ಪಿಸುವ ಪ್ರಸಂಗ ಸಂಭವಿಸುತ್ತದೆ. ಇಂತಹ ‘ಅನವಸ್ಥಾ’ ಎಂಬ ಮಹಾದೋಷವೂ ಸಂಭವಿಸುವುದರಿಂದ ಯಾವ ವಿಧಾನದಿಂದಲೂ ಭೇದವನ್ನು ಸಾಧಿಸಲು ಸಾಧ್ಯವಿಲ್ಲ. ಇಂತಹ ಅನೇಕ ಪ್ರಬಲದೋಷಗಳ ಸರಮಾಲೆಗಳಿಂದ ‘ಭೇದವೆಂಬುದೇ’ ಸಿದ್ಧವಾಗುವುದಿಲ್ಲವೆಂದು ಸಾಧಿಸಿದ ಶ್ರೀಮದಾನಂದ ತೀರ್ಥರ ಅತ್ಯಪೂರ್ವವಾದ ವಾದವೈಖರಿಯಿಂದ ತತ್ತರಿಸಿದ ಪ್ರತಿವಾದಿಗಳು ನಿರುತ್ತರರಾಗಿ ಆಶ್ಚರ್ಯಸಮುದ್ರದಲ್ಲಿ ಮುಳುಗಿದರು. ನಂತರ ಆ ಶ್ರೀಮದಾನಂದತೀರ್ಥರು ತಮ್ಮ ಗಂಭೀರವಾಗ್ ವೈಖರಿಯಿಂದ ದಿಗ್ಭ್ರಮೆಗೊಂಡ ದೀನ ಸುಜನರಿಗೆ ದಿಕ್ಕು ತೋರಿಸಲು ಹೀಗೆ ಉಪದೇಶಾಮೃತವನ್ನು ನೀಡುತ್ತಾರೆ.- ತರ್ಕವಿತರ್ಕಗಳ ಚಾತುರ್ಯದಿಂದ ತತ್ವವನ್ನು ಅತತ್ವವೆಂದು ಸಾಧಿಸಬಹುದು. ಅತತ್ವವನ್ನು ತತ್ವವೆಂದು ಸಾಧಿಸಬಹುದು. ಆದ್ದರಿಂದ ಕೇವಲ ತರ್ಕವು ಪ್ರಮಾಣವಾಗುವುದಿಲ್ಲ. ಇಂತಹ ಸ್ವಚ್ಛಂದ ಶುಷ್ಕತರ್ಕಸರಣಿಯಿಂದ ದಾರಿತಪ್ಪಿಸುವವರ ಬಗ್ಗೆ ಜಾಗೃತರಾಗಿರಬೇಕು. ನಿರ್ದುಷ್ಟ ಆಗಮಗಳು, ನಿರ್ದುಷ್ಟ ಪ್ರತ್ಯಕ್ಷ, ಮತ್ತು ಸಾಕ್ಷಿ ಇವುಗಳು ಸ್ವತಂತ್ರಪ್ರಮಾಣಗಳು. ಅನುಮಾನವು ಈ ಸ್ವತಂತ್ರ ಪ್ರಮಾಣಗಳನ್ನು ಅನುಸರಿಸಿಕೊಂಡೇ ಮಾನ (ಪ್ರಮಾಣ)ವಾಗುತ್ತದೆ. (ಅನು=ಪ್ರತ್ಯಕ್ಷಾದಿಪ್ರಮಾಣಮನುಸೃತ್ಯೈವ ಮಾನಂ= ಪ್ರಮಾಣಂ ಭವತೀತ್ಯನುಮಾನಮಿತಿ ಬೋಧ್ಯಮ್) ಪ್ರತ್ಯಕ್ಷಾದಿ ಪ್ರಮಾಣಗಳಿಗೆ ವಿರುದ್ಧವಾಗಿ ಹೊರಡುವ ಕುತರ್ಕಗಳು ಎಂದೂ ಪ್ರಮಾಣವಲ್ಲದ್ದರಿಂದ ‘‘ನೈಷಾಂ ತರ್ಕೇಣ ಮತಿರಾಪನೇಯಾ’’ ‘‘ಶುಷ್ಕತರ್ಕಂ ತು ವರ್ಜಯೇತ್’’ ಮುಂತಾದ ಶ್ರುತಿಸ್ಮೃತಿಗಳು, ಸ್ವಚ್ಛಂದ ಶುಷ್ಕತರ್ಕಗಳಿಗೆ ವಶರಾಗಿ ಅವೈದಿಕಮಾರ್ಗವನ್ನು ಅನುಸರಿಸಬಾರದೆಂದು ಎಚ್ಚರಿಸುತ್ತವೆ.ವೇದಾದಿ ಪ್ರಮಾಣಮೂಲಕವಾದ ಸತ್ತರ್ಕಗಳು ಪ್ರಮಾಣವಾದ್ದರಿಂದ ಈ ಸತ್ತರ್ಕಗಳನ್ನು ಮಾತ್ರ ಪ್ರಮಾಣಗಳೆಂದು ಸ್ವೀಕರಿಸಬೇಕು. ಹೀಗೆ

ತಲಸ್ಪರ್ಶಿಯಾದ ತರ್ಕಶಾಸ್ತ್ರಪಾಂಡಿತ್ಯವನ್ನು ಪ್ರಕಾಶಿಸಿ, ಸುಜನಮನೋರಂಜಕವಾದ ಅತ್ಯುತ್ತಮ ಮಾರ್ಗದರ್ಶನವನ್ನು ಮಾಡಿದ ಶ್ರೀಪೂರ್ಣಪ್ರಜ್ಞರಿಗೆ ಗುರುಗಳಾದ ಶ್ರೀಅಚ್ಯುತಪ್ರೇಕ್ಷರು ''ಅನುಮಾನತೀರ್ಥ'' ರೆಂಬ ಶ್ರೇಷ್ಠ ಬಿರುದನ್ನು ನೀಡಿದರು.

ಶ್ರೀಮಧ್ವಾಚಾರ್ಯರು ಈ ರೀತಿಯಾಗಿ ಭೇದವಾದವನ್ನು ಖಂಡಿಸಿದಾಗ ಪ್ರಚಂಡಪಂಡಿತಮಂಡಲಿಯೇ ಮೌಢ್ಯವನ್ನು ತಾಳಿದ್ದರಿಂದ ಭೇದವು ಬಹು ಸುಲಭವಾಗಿ ಸಿದ್ಧವಾಗದೇ ಬಹುಗಹನವೆಂದು ಸಿದ್ಧವಾಯಿತು. ಇಂತಹ ಭೇದಸ್ವರೂಪವನ್ನು ಅತಿ ಜಡಮತಿಗಳಾದ ನಮ್ಮಂತಹವರು ತಿಳಿಯುವ ಬಗೆ ಹೇಗೆ? ಹೀಗೆ ಅಸ್ಪಷ್ಟವಾದ ಭೇದವನ್ನು ಸುಸ್ಪಷ್ಟಪಡಿಸಲು ವೇದವೇದಾಂತ ಗ್ರಂಥಗಳು ಅಗತ್ಯವಾಗಿವೆ. ಆದ್ದರಿಂದ ಶ್ರುತಿಯು 'ಸತ್ಯಂ ಭಿದಾ ಸತ್ಯಂ ಭಿದಾ ಸತ್ಯಂ ಭಿದಾ ಮೈವಾರುವಣ್ಯೋ ಮೈವಾರುವಣ್ಯೋ ಮೈವಾರುವಣ್ಯಃ '' ಮುಂತಾದ ನಾನಾವಾಕ್ಯಗಳಿಂದ, ಘಂಟಾಘೋಷವಾಗಿ ಭೇದದ ಸತ್ಯತೆಯನ್ನು ಘೋಷಿಸುತ್ತವೆ. ಈ ಭೇದದ ಇನ್ನೊಂದು ಹೆಸರು ಅನ್ಯೋನ್ಯಾಭಾವ. ಈ ಭೇದದ ಸ್ವರೂಪದ ಬಗ್ಗೆ ಸೂಕ್ಷ್ಮವಾದ ವಿಶಿಷ್ಟವಿಮರ್ಶೆಯನ್ನು ಶ್ರೀಮದಾನಂದತೀರ್ಥರು 'ತೈತ್ತರೀಯೋಪನಿಷತ್ ಭಾಷ್ಯ', 'ಶ್ರೀಮದ್ ಬ್ರಹ್ಮಸೂತ್ರಭಾಷ್ಯ', 'ಶ್ರೀಮದನುವ್ಯಾಖ್ಯಾನ', 'ಶ್ರೀಮದ್ ವಿಷ್ಣುತತ್ತ್ವವಿನಿರ್ಣಯ' ಗ್ರಂಥಗಳಲ್ಲಿ ಬೇರೆ ಬೇರೆ ರೀತಿಯಾಗಿ ವಿಶದವಾಗಿ ಮಾಡಿದ್ದಾರೆ. ಇದರ ಬಗ್ಗೆ ಸಂಕ್ಷೇಪ ವಿವರವು ಕೆಳಗೆ ವಿವರಿಸಲ್ಪಡುತ್ತದೆ.

ಪ್ರತಿಯೊಂದು ಪ್ರಾಣಿಗೂ ಪ್ರತಿಕ್ಷಣವೂ ಅನುಭವಗೋಚರವಾಗುವ ಭೇದವನ್ನು ಕುಟಿಲತರ್ಕದ ಬಲದಿಂದ ಅಲ್ಲಗಳೆಯಲು ಸಾಧ್ಯವಿಲ್ಲ. ಶ್ರೀವ್ಯಾಸರಾಜರು ನಿರ್ದುಷ್ಟಪ್ರತ್ಯಕ್ಷವನ್ನು ಸಿಂಹಕ್ಕೆ, ಕುಟಿಲತರ್ಕವನ್ನು ಕುಟಿಲನರಿಗೆ ಹೋಲಿಸಿದ್ದಾರೆ. ಆದರೆ ನರಿಯು ಮಾತ್ರ ಸಿಂಹಕ್ಕೆ ಹೆದರದೇ ಸ್ವಚ್ಛಂದವಾಗಿ ಸಂಚರಿಸುವಂತಿಲ್ಲ. ಅಂತೆಯೇ ಸಿಂಹದಂತೆ ಬಹುಬಲಿಷ್ಠವಾದ ಸಾಕ್ಷಿ ಮುಂತಾದ ಪ್ರಮಾಣಗಳಿಗೆ ವಿರುದ್ಧವಾಗಿ ಕುಟಿಲನರಿಯಂತಿರುವ ಕುಟಿಲತರ್ಕದ ಕೈವಾಡ ಎಂದೂ ನಡೆಯಲಾರದು. ನಾವೆಲ್ಲರೂ ಕಟ್ಟೆ, ಬಟ್ಟೆ, ಬಟ್ಟಲು, ತೊಟ್ಟಿಲು, ಕಟ್ಟಿಗೆ, ಪೆಟ್ಟಿಗೆ, ತಾಟು, ಕಪಾಟುಗಳಲ್ಲಿ ಪರಸ್ಪರಭೇದವನ್ನು ಪ್ರತಿಕ್ಷಣ ಅನುಭವಿಸುವಾಗ, ಅತ್ಯಂತ ಪ್ರಬಲವಾದ ಈ ಅನುಭವವನ್ನು ಕೇವಲವಾದದಿಂದ ಅಲ್ಲಗಳೆಯಲು ಹೇಗೆ ತಾನೇ ಸಾಧ್ಯ? ಭೇದವು ವಸ್ತುವಿಗಿಂತ ಪ್ರತ್ಯೇಕವಲ್ಲ. ಅದು ವಸ್ತುವಿನ ಸ್ವರೂಪವೇ ಆಗಿದೆ. ವಸ್ತುವು ತೋರುವಾಗಲೇ ಅದರಲ್ಲಿರುವ ಭೇದವೂ ತೋರುತ್ತದೆ. ನಾವು ಯಾವುದೇ ವಸ್ತುವನ್ನು ನೋಡುವಾಗಲೂ 'ಈ ವಸ್ತು ಸುತ್ತಮುತ್ತಲಿನ ಉಳಿದ ವಸ್ತುಗಳಿಗಿಂತ ಪ್ರತ್ಯೇಕವಾಗಿದೆ' ಎಂಬುದನ್ನೂ ಜೊತೆಯಲ್ಲೇ ತಿಳಿಯುತ್ತೇವೆ. ಜೀವ, ಪರಮಾತ್ಮರನ್ನು ತಿಳಿದುಕೊಳ್ಳುವಾಗಲೇ ಅವರಲ್ಲಿರುವ ಪ್ರತ್ಯೇಕತೆಯ ಅರಿವೂ ನಮಗೆ ಬರುತ್ತದೆ. ಆದ್ದರಿಂದ ಜೀವ, ಪರಮಾತ್ಮರೆಂಬ ವಸ್ತುಜ್ಞಾನವು ಮೊದಲೇ? ಭೇದಜ್ಞಾನವು ಮೊದಲೇ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲವಾದ್ದರಿಂದ ಅನ್ಯೋನ್ಯಾಶ್ರಯದೋಷಕ್ಕೆ ಅವಕಾಶವಿಲ್ಲ. ಭೇದ ಎನ್ನುವುದು ವಸ್ತುವಿನ ಸ್ವರೂಪದಲ್ಲೇ ಅಡಕವಾಗಿರುವುದರಿಂದ, ಪ್ರತಿಯೊಂದು ವಸ್ತುವನ್ನೂ ಅದರ ಗುಣ, ಧರ್ಮ, ಆಕೃತಿಗಳ ಜೊತೆಗೆ ಒಮ್ಮೆಗೇ ತಿಳಿಯುವಂತೆ ಅದರಲ್ಲಿರುವ ಪ್ರತ್ಯೇಕತೆಯನ್ನೂ ಒಮ್ಮೆಗೇ ತಿಳಿದುಕೊಳ್ಳುತ್ತೇವೆ. ಉದಾ:- ಕೋಮಲ ಕಮಲವನ್ನು ಕಂಡ ಕೂಡಲೇ ಅದರ ಸ್ವರೂಪವೇ ಆಗಿರುವ ಬಣ್ಣ, ಕೋಮಲತೆ, ಸುಗಂಧಮಕರಂದ, ದಿವ್ಯಸೌಂದರ್ಯ, ದಳ, ಕೇಸರಗಳ ಆಕೃತಿ, ಉಳಿದ ವಸ್ತುಗಳಿಗಿಂತ ಪ್ರತ್ಯೇಕತೆ, ಇವು ಒಮ್ಮೆಗೇ ತೋರುತ್ತವೆಯಷ್ಟೆ. ಹೀಗೆ ವಸ್ತುವಿನ ಜ್ಞಾನವೇ ಭೇದಜ್ಞಾನವಾದ್ದರಿಂದ, ಭೇದವು ವಿಶೇಷಣ ಅಥವಾ ವಿಶೇಷ್ಯವಾಗಿ ತೋರುವ ಪ್ರಸಕ್ತಿಯಿಲ್ಲವಾದ್ದರಿಂದ ಭೇದಜ್ಞಾನ ಬರಲು ಇನ್ನೊಂದು ಭೇದಜ್ಞಾನದ ಅಪೇಕ್ಷೆ ಇರುವುದಿಲ್ಲ. ಆದ್ದರಿಂದ ಭೇದಸ್ವರೂಪವನ್ನು ತಿಳಿಯುವ ವಿಷಯದಲ್ಲಿ 'ಅನವಸ್ಥಾ' ಎಂಬ ದೋಷಕ್ಕೂ ಅವಕಾಶವಿಲ್ಲ.

ಈ ಭೇದದ ಬಗ್ಗೆ ಉದ್ಭವಿಸುವ ಕೆಲವು ಪ್ರಮುಖ ಪ್ರಶ್ನೆಗಳಿಗೆ ಹೀಗೆ ಉತ್ತರವನ್ನು ಅರಿಯಬೇಕು.

1. ಭೇದವು ವಸ್ತುವಿನ ಸ್ವರೂಪವೇ ಆಗಿದ್ದರೆ 'ವಸ್ತುವಿನ ಭೇದ' ಎಂಬುದಾಗಿ ವಸ್ತುವಿಗೂ ಭೇದಕ್ಕೂ ಸಂಬಂಧ ತೋರುವುದು ಹೇಗೆ? ಪದಾರ್ಥಗಳು ಬೇರೆ ಬೇರೆಯಾಗಿದ್ದರೆ ಮಾತ್ರ ಸಂಬಂಧವು ತೋರುತ್ತದೆ. ಉದಾ:- ದೇವದತ್ತನೂ ಮನೆಯೂ ಬೇರೆಬೇರೆಯಾದ್ದರಿಂದ 'ದೇವದತ್ತನ ಮನೆ' ಎಂಬ ಸಂಬಂಧವು ತೋರುತ್ತದೆ. ಪದಾರ್ಥವು ಒಂದೇ ಆಗಿದ್ದರೆ ಈ ಸಂಬಂಧವು ಹೇಗೆ?

ಉತ್ತರ:- ವಸ್ತುವೂ ಅದರ ಸ್ವರೂಪವೂ ಬೇರೆಬೇರೆಯಲ್ಲ. ಆದರೂ ವಸ್ತುವಿನ ಸ್ವರೂಪವೆಂದು ವ್ಯವಹರಿಸುತ್ತೇವೆ. ಅದರಂತೆ ವಸ್ತು ಮತ್ತು ಅದರ ಭೇದ ಒಂದೇ ಆಗಿದ್ದರೂ ವಸ್ತುವಿನ ಭೇದವೆಂದು ವ್ಯವಹರಿಸಬಹುದು.

2. ಪ್ರಶ್ನೆ:- ಜೀವ, ಪರಮಾತ್ಮರ ಭೇದ ಎಂದು ವ್ಯವಹರಿಸುವಾಗ ಜೀವ, ಪರಮಾತ್ಮರು ಇಬ್ಬರು ತೋರುತ್ತಾರೆ. 'ಭೇದ' ಎಂದು ಒಂದೇ ತೋರುತ್ತದೆ. ಒಂದೇ ಭೇದವು ಜೀವ, ಪರಮಾತ್ಮರೆಂಬ ಇಬ್ಬರು ವ್ಯಕ್ತಿಗಳ ಸ್ವರೂಪವಾಗಲು ಹೇಗೆ ಸಾಧ್ಯ?

ಉತ್ತರ:- 'ಜೀವ, ಪರಮಾತ್ಮರ ಭೇದ' ಎಂಬ ವ್ಯವಹಾರದಲ್ಲಿ ಜೀವ, ಪರಮಾತ್ಮರ ಸ್ವರೂಪವಾದ ಎರಡು ಭೇದಗಳೇ ತೋರುತ್ತವೆ.

ಜೀವನಲ್ಲಿರುವ ಪರಮಾತ್ಮನ ಭೇದ ಜೀವನಸ್ವರೂಪ. ಪರಮಾತ್ಮನಲ್ಲಿರುವ ಜೀವನ ಭೇದ ಪರಮಾತ್ಮನ ಸ್ವರೂಪ. 'ಜೀವ ಪರಮಾತ್ಮರ ಭೇದ ಎಂದು ವ್ಯವಹರಿಸುವಾಗ ಭೇದ ಎಂಬ ಏಕವಚನ ಪ್ರಯೋಗ. ಏಕೆಂದರೆ, ಸಮುದಾಯ ಅಭಿಪ್ರಾಯದಿಂದ. ಉದಾ:- 'ಹಂಸಗಳ ರೂಪ'ಎಂಬ ವ್ಯವಹಾರ. ಪ್ರತಿಯೊಂದು ಹಂಸಗಳಲ್ಲಿರುವ ರೂಪ ಪ್ರತ್ಯೇಕ,ಪ್ರತ್ಯೇಕವಾದರೂ ಸಮುದಾಯದ ಅಪೇಕ್ಷೆಯಿಂದ ಏಕವಚನವನ್ನು ಉಪಯೋಗಿಸುತ್ತಾರೆ ಹೊರತು ಒಂದೇ ರೂಪವು ಅನೇಕ ಹಂಸಗಳಲ್ಲಿದೆಯೆಂಬ ಅಭಿಪ್ರಾಯವಲ್ಲ.

3.ಪ್ರಶ್ನೆ:- ಭೇದವನ್ನು ವಸ್ತುಸ್ವರೂಪವೆಂದು ಏಕೆ ಒಪ್ಪಬೇಕು?

ಉತ್ತರ:- ಭೇದವು ವಸ್ತುಸ್ವರೂಪವಲ್ಲದಿದ್ದರೆ ಪದಾರ್ಥವು ತೋರುವಾಗ ಅದರ ಪ್ರತ್ಯೇಕತೆಯೂ ಜೊತೆಗೆ ತೋರದಿರಬೇಕಾಗುತ್ತದೆ. ಆದರೆ ನಮಗೆಲ್ಲರಿಗೂ ಪದಾರ್ಥದ ಜೊತೆಗೇ ಅದರ ಪ್ರತ್ಯೇಕತೆಯೂ ತಿಳಿಯುತ್ತದೆಯಾದ್ದರಿಂದ ಭೇದವು ವಸ್ತುಸ್ವರೂಪವೇ ಆಗಿದೆ. ವಸ್ತುವು ತೋರುವಾಗ ಅದರಲ್ಲಿರುವ ಪ್ರತ್ಯೇಕತೆಯೂ ತೋರದಿದ್ದರೆ ಎದುರಿಗಿರುವ ಕಂಭಕ್ಕೂ ತನಗೂ(ಆತ್ಮನಿಗೂ) ಭೇದವು ತೋರದೇ ತಾನೇ(ಆತ್ಮನೇ)ಕಂಭವೋ ಎಂಬ ಸಂದೇಹವು ಸಂಭವಿಸಬೇಕಾಗುತ್ತದೆ. ಅಥವಾ ತಾನೇ(ಆತ್ಮನೇ)ಕಂಭವೆಂಬ ವಿಪರೀತ ಜ್ಞಾನವುಂಟಾದೀತು. ಇಂತಹ ಸಂದೇಹವಾಗಲೀ, ವಿಪರೀತಜ್ಞಾನವಾಗಲೀ ಯಾರಿಗೂ ಬರುವುದಿಲ್ಲ. ಆದ್ದರಿಂದ ವಸ್ತುವಿನ ಜೊತೆಗೆ ಅದರಲ್ಲಿ ಇತರ ವಸ್ತುಗಳ ಭೇದವೂ ತೋರುತ್ತದೆ.

4.ಹಾಗಾದರೆ ಶುಕ್ತಿಯನ್ನು(ಮುತ್ತಿನ ಚಿಪ್ಪನ್ನು) ನೋಡಿದಾಗ ಅದರಲ್ಲಿರುವ ಬೆಳ್ಳಿಯ ಭೇದವೂ ತೋರುವುದರಿಂದ ಯಾರಿಗೂ ಶುಕ್ತಿಯನ್ನು ನೋಡಿ ಬೆಳ್ಳಿಯೆಂಬ ಭ್ರಮೆಯೇ ಉಂಟಾಗದಿರುವ ಪ್ರಸಂಗ ಸಂಭವಿಸುತ್ತದೆ?

ಉತ್ತರ:- ವಸ್ತುವು ತೋರುವಾಗ ಅದರಲ್ಲಿ ಸಾಮಾನ್ಯರೂಪದಿಂದ ಇತರ ವಸ್ತುಗಳ ಭೇದವೂ ತೋರುತ್ತದೆ. ಇಲ್ಲದಿದ್ದರೆ ಶುಕ್ತಿಯನ್ನು ನೋಡಿದಾಗ ಅದರಲ್ಲಿ ಇತರ ವಸ್ತುಗಳ ಭೇದವೇ ತೋರದಿರುವುದರಿಂದ ಇದು ಬಂಗಾರವೋ, ಅಂಗಾರವೋ, ಚಂದಿರವೋ, ಮಂದಿರವೋ ಮುಂತಾದ ಅನಂತವಸ್ತುಗಳ ಸಂಶಯವೂ ಒಮ್ಮೆಗೇ ಉಂಟಾಗಬೇಕಾಗುತ್ತದೆ. ಇಂತಹ ಸಂದೇಹವು ಯಾರಿಗೂ ಬರುವುದಿಲ್ಲ. ಆದ್ದರಿಂದ ವಸ್ತುವು ತೋರುವಾಗ ಅದರಲ್ಲಿ ಸಾಮಾನ್ಯರೂಪದಿಂದ ಇತರ ವಸ್ತುಗಳ ಭೇದ ತೋರಿಯೇ ತೋರುತ್ತದೆ. ವಿಶೇಷರೂಪದಿಂದ ಭೇದವು ತೋರದೇ ಇರಬಹುದು. ಶುಕ್ತಿಯಲ್ಲಿ ಸಾಮಾನ್ಯರೂಪದಿಂದ ಇತರ ವಸ್ತುಗಳ ಪ್ರತ್ಯೇಕತೆ ತೋರಿದ್ದರೂ, ಅದರಲ್ಲಿ ಬೆಳ್ಳಿಯ ಸಾದೃಶ್ಯವಿರುವುದರಿಂದ ಬೆಳ್ಳಿಯಲ್ಲವೆನ್ನುವ ವಿಶೇಷರೂಪದಿಂದ ಭೇದವು ತೋರದಿರುವುದರಿಂದ ಅಲ್ಲಿ ಸಂಶಯಕ್ಕೆ ಅವಕಾಶವಿದೆ.

5. ವಸ್ತುಗಳಿಗೆ ಇತರ ಎಲ್ಲಾ ವಸ್ತುಗಳಿಂದ ಭೇದವನ್ನು ತಿಳಿಯುವಾಗ ಅನಂತವಾದ ಆ ಎಲ್ಲಾ ವಸ್ತುಗಳ ಜ್ಞಾನವು ಏಕಕಾಲದಲ್ಲಿ ಬರಬೇಕಾಗುತ್ತದೆ. ಇದು ಸಾಧ್ಯವೇ? ಸಾಧ್ಯವೆಂದರೆ ಎಲ್ಲರೂ ಸರ್ವವಸ್ತುಗಳನ್ನು ತಿಳಿದಿದ್ದರಿಂದ ಎಲ್ಲರೂ ಸರ್ವಜ್ಞರಾಗುವ ಪ್ರಸಂಗ ಸಂಭವಿಸುತ್ತದೆ. ಆದ್ದರಿಂದ ಏಕಕಾಲದಲ್ಲಿ ಎಲ್ಲಾ ವಸ್ತುಗಳ ಜ್ಞಾನ ಬರುವುದಿಲ್ಲವೆಂದರೆ 'ಭೇದವು' ವಸ್ತುವಿನ ಸ್ವರೂಪವೆಂದು ಸಿದ್ಧವಾಗುವುದಿಲ್ಲ.

ಉತ್ತರ:- ನಾವು ತಿರುಪತಿ ಅಥವಾ ಉಡುಪಿಯಲ್ಲಿ ಭಗವಂತನಿಗೆ ಲಕ್ಷದೀಪೋತ್ಸವ ಮಾಡುವುದನ್ನು ನೋಡಬಹುದು. ಆಗ ನಮಗೆ ಏಕಕಾಲದಲ್ಲಿ ಒಟ್ಟಿಗೆ ಲಕ್ಷದೀಪಗಳ ಜ್ಞಾನವುಂಟಾಗುತ್ತದೆ. ರಾತ್ರಿ ಆಕಾಶವನ್ನು ನೋಡಿದಾಗ ಏಕಕಾಲದಲ್ಲಿ ಅಸಂಖ್ಯ ನಕ್ಷತ್ರಗಳನ್ನು ಒಟ್ಟಿಗೆ ತಿಳಿಯುತ್ತೇವೆ. ಅದರಂತೆ ಸಾಮಾನ್ಯರೂಪದಿಂದ ಏಕಕಾಲದಲ್ಲಿ ಎಲ್ಲಾ ವಸ್ತುಗಳ ಜ್ಞಾನ ಒಟ್ಟಿಗೆ ಬರುವುದರಿಂದ ಪ್ರತಿಯೊಂದು ವಸ್ತುವಿನಲ್ಲಿ ಉಳಿದ ಎಲ್ಲಾ ವಸ್ತುಗಳಿಂದ ಭೇದವನ್ನು ತಿಳಿಯುತ್ತೇವೆ.ವಿಶೇಷರೂಪದಿಂದ ಎಲ್ಲಾ ವಸ್ತುಗಳನ್ನು ಎಲ್ಲರೂ ತಿಳಿಯದಿರುವುದರಿಂದ ಎಲ್ಲರೂ ಸರ್ವಜ್ಞರಾಗುವ ಪ್ರಸಂಗವಿಲ್ಲ.

6.ಪ್ರಶ್ನೆ:- ಭೇದವು ವಸ್ತುಸ್ವರೂಪವೇ ಆದರೆ ವಸ್ತುವಿನಭೇದ ಎಂಬ ವಸ್ತು ಮತ್ತು ಭೇದಗಳ ಪ್ರತ್ಯೇಕ ವ್ಯವಹಾರವು ಹೇಗೆ?

ಉತ್ತರ:- ವಸ್ತು ಮತ್ತು ಅದರ ಭೇದವು ಒಂದೇ ಆಗಿದ್ದರೂ, 'ವಸ್ತುವಿನ ಭೇದ' ಎಂಬ ಪ್ರತ್ಯೇಕವ್ಯವಹಾರವನ್ನು ನಿರ್ವಹಿಸುವುದಕ್ಕಾಗಿ ಎಲ್ಲಾ ವಸ್ತುಗಳಲ್ಲಿ ಸ್ವಾಭಾವಿಕವಾಗಿ ಇರುವ ''ವಿಶೇಷ''ಎಂಬ ಶಕ್ತಿಯನ್ನು ಕಾರಣವೆಂದು ತಿಳಿಯಬೇಕು. ಪ್ರತಿಯೊಂದು ವಸ್ತುವಿನಲ್ಲಿ ಸ್ವಾಭಾವಿಕವಾಗಿಯೇ ಅಡಕವಾಗಿರುವ ಈ ವಿಶೇಷಶಕ್ತಿಯ ಕಾರಣದಿಂದಲೇ ಅಭೇದವಿರುವ ಅನೇಕ ಸ್ಥಳಗಳಲ್ಲಿ ಪ್ರತ್ಯೇಕ ವ್ಯವಹಾರವು ಉಂಟಾಗುತ್ತದೆ. ಈ ವಿಶೇಷವೆಂಬ ಶಕ್ತಿಯನ್ನು ಉಳಿದ ಮತಾಚಾರ್ಯರೂ ಒಪ್ಪಲೇಬೇಕೆಂದು ಶ್ರೀಮದಾನಂದ ತೀರ್ಥರು ಪ್ರಬಲಪ್ರಮಾಣ ಮೂಲಕ ಸದ್‌ಯುಕ್ತಿಗಳಿಂದ ಯುಕ್ತವಾದ ವಾದದಿಂದ ಸಮರ್ಥಿಸಿದ್ದಾರೆ. ಆದ್ದರಿಂದ ಎಲ್ಲಾ ವಸ್ತುಗಳಲ್ಲಿ ಭೇದವೈಚಿತ್ರ್ಯಗಳಿದ್ದರೂ ಅವುಗಳು ಆ ಪದಾರ್ಥದ ಸ್ವಭಾವವೇ ಆಗಿದ್ದರೂ ಕೆಲವೊಮ್ಮೆ ವಸ್ತುವು ತೋರುವಾಗ ಆ ಭಿನ್ನತೆಯು ತೋರದಿರಬಹುದು. ನಾವು ಯಾವ ವಸ್ತುವನ್ನು ಎಷ್ಟೇ ವಿಶಿಷ್ಟವಾಗಿ ಸುಸ್ಪಷ್ಟವಾಗಿ ತಿಳಿದರೂ, ಇನ್ನೂ ಅಸ್ಪಷ್ಟವಾಗಿ

ಉಳಿದುಕೊಂಡ ಎಷ್ಟೋ ವಿಶಿಷ್ಟಗುಣಧರ್ಮವೈಚಿತ್ರ್ಯಗಳು ಆ ವಸ್ತುವಿನ ಸ್ವರೂಪವೇ ಆಗಿರುತ್ತವೆ. ಉದಾ:- ಸಾಸಿವೆಗಿಂತ ಚಿಕ್ಕ ಆಕಾರವುಳ್ಳ ಒಂದು ಅಶ್ವತ್ಥಬೀಜ ಒಂದು ವಿಶಾಲ ಅಶ್ವತ್ಥವೃಕ್ಷವನ್ನು ಸೃಷ್ಟಿಸುತ್ತದೆ. ಆ ವೃಕ್ಷದಲ್ಲಿ ತುಂಬಿರುವ ಫಲಗಳಲ್ಲಿ ಅನೇಕ ಕೋಟಿ ಬೀಜಗಳಿರುತ್ತವೆ. ಆ ಬೀಜಗಳೂ ಅನೇಕ ಕೋಟಿ ಅಶ್ವತ್ಥವೃಕ್ಷಗಳನ್ನು ಸೃಷ್ಟಿಸುತ್ತವೆ. ಹೀಗೆ ಅಸಂಖ್ಯ ಅಶ್ವತ್ಥಮಹಾವೃಕ್ಷಗಳನ್ನು ಸೃಷ್ಟಿಸುವ ವಿಶಿಷ್ಟಗುಣಧರ್ಮವೈಚಿತ್ರ್ಯಗಳು ಮೊದಲನೆಯ ಆ ಚಿಕ್ಕ ಅಶ್ವತ್ಥಬೀಜದ ಸ್ವರೂಪವೇ ಆಗಿವೆ. ಹೀಗೆ ಪ್ರತಿಯೊಂದು ವಸ್ತುಗಳಲ್ಲಿ ಸ್ವಾಭಾವಿಕವಾಗಿರುವ ವಿಧವಿಧವಾದ ವಿಶೇಷಗುಣಧರ್ಮವೈಚಿತ್ರ್ಯಗಳು ನಮ್ಮ ಅನುಭವಕ್ಕೆ ಗೋಚರವಾಗುವುದನ್ನು, ನಾವು ತಿಳಿಯದಿರುವ ಅನೇಕ ಸ್ವಾಭಾವಿಕವಿಶಿಷ್ಟಗುಣಧರ್ಮವೈಚಿತ್ರ್ಯಗಳು ಆ ವಸ್ತುವಿನಲ್ಲೇ ಅಡಕವಾಗಿರುವುದನ್ನೂ ಅನುಭವಿಸುತ್ತಿದ್ದೇವೆ. ಹೀಗೆ ನಾವು ವಸ್ತುಸ್ವರೂಪವಾದ ವಿಶೇಷವೈಚಿತ್ರ್ಯಗಳ ಜೊತೆಗೇ ಆ ವಸ್ತುಸ್ವರೂಪವನ್ನು ತಿಳಿದರೂ, ಆ ವಸ್ತುವಿನ ಸ್ವರೂಪವೇ ಆಗಿರುವ ಅಸಂಖ್ಯವಿಶೇಷವೈಚಿತ್ರ್ಯಗಳನ್ನು ತಿಳಿದಿರುವುದಿಲ್ಲ. ಇದಕ್ಕೆ ಆ ವಸ್ತುಗಳಲ್ಲಿರುವ ಸ್ವಾಭಾವಿಕವಿಶೇಷಶಕ್ತಿಯೇ ಕಾರಣವೆಂಬುದನ್ನು ತೋರಿಸಿಕೊಟ್ಟವರು ಶ್ರೀಮದಾನಂದತೀರ್ಥರು. ಇದು ತತ್ತ್ವಜ್ಞಾನಕ್ಕೆ ಶ್ರೀಮದಾನಂದತೀರ್ಥರ ವಿಶಿಷ್ಟ ಕೊಡುಗೆ. ಹೆಚ್ಚೇಕೆ. ನಮ್ಮ ನಮ್ಮ ಸ್ವರೂಪದ ಬಗ್ಗೆ ನಾವು ಪರಿಶೀಲಿಸಿದರೆ, ಅನಾದಿ ನಿತ್ಯ ಹಾಗೂ ಸ್ವಪ್ರಕಾಶವಾದ ನಮ್ಮ ನಮ್ಮ ಸ್ವರೂಪವನ್ನು ಅನಾದಿಕಾಲದಿಂದ ನಿರಂತರ ತಿಳಿದಿದ್ದರೂ ಆ ಸ್ವರೂಪಕ್ಕಿಂತ ಬೇರೆಯಲ್ಲದ ಆಕೃತಿ, ಯೋಗ್ಯತೆ, ಜ್ಞಾನಾನಂದಾದಿ ವಿಶೇಷಗುಣಧರ್ಮವೈಚಿತ್ರ್ಯಗಳನ್ನು ಮುಕ್ತಿ ದೊರೆಯುವವರೆಗೆ ತಿಳಿಯುವುದಿಲ್ಲ. ಇದಕ್ಕೆ ನಮ್ಮಲ್ಲಿ ಸ್ವಾಭಾವಿಕವಾಗಿರುವ ವಿಶೇಷ ವೆಂಬ ಶಕ್ತಿಯೇ ಕಾರಣ. ಪ್ರಬಲಪ್ರಮಾಣಗಳ ಪರಂಪರೆಯಿಂದ ಪ್ರಮಿತವಾದ ತತ್ತ್ವಗಳನ್ನು ಕುತರ್ಕಗಳಿಂದ ತತ್ತ್ವವಲ್ಲವೆಂದು ಅಲ್ಲಗಳೆಯಲು ಸಾಧ್ಯವಿಲ್ಲ.

ಹೀಗೆ ಆಯಾ ವಸ್ತುಗಳ ಸ್ವರೂಪವೇ ಆಗಿರುವ ಭೇದಗಳು ಸಾಮಾನ್ಯರೂಪದಿಂದ ಎಲ್ಲರಿಗೂ ನಿತ್ಯವಾಗಿ ಅನುಭವಸಿದ್ಧ ವಾಗಿದ್ದರೂ, ಆ ಭೇದಗಳಲ್ಲಿ ಅಡಕವಾದ ಅನೇಕವಿಶೇಷವೈಚಿತ್ರ್ಯಗಳನ್ನು ವೇದಾದಿಶಾಸ್ತ್ರಗಳಿಲ್ಲದೇ ತಿಳಿಯಲು ಸಾಧ್ಯವಿಲ್ಲ. ವಿಶೇಷ ರೂಪದಿಂದ ಭೇದವು ಯಾರಿಗೂ ತಿಳಿಯದೇ ಇರುವುದರಿಂದಲೇ ಭೇದಕ್ಕೆ (ದ್ವೈತಕ್ಕೆ) ಅಪೂರ್ವತೆಯೆಂಬ ತಾತ್ಪರ್ಯಲಿಂಗವಿದೆ.

ಪ್ರಶ್ನೆ:- ಪಂಚಭೇದರೂಪವಾದ ದ್ವೈತವನ್ನು ಅನುಭವದಿಂದಲೇ ತಿಳಿಯುತ್ತೇವೆ. ಇಂತಹ ದ್ವೈತವನ್ನು ತಿಳಿಯಲು ಶಾಸ್ತ್ರಗಳ ಅಗತ್ಯವಿಲ್ಲ. ಹೇಗೆಂದರೆ-'ನಾನು ಪರಮಾತ್ಮನಲ್ಲ'ವೆಂಬ ಅನುಭವ ಯಾರಿಗಿಲ್ಲ? ಆದ್ದರಿಂದ ಜೀವಪರಮಾತ್ಮರ ಭೇದ ಎಲ್ಲರಿಗೂ ಅನುಭವಸಿದ್ಧ. 2. ನಾನು ಅವನಲ್ಲ ಎಂಬ ಅನುಭವವೂ ಇರುವುದರಿಂದ ಜೀವ,ಜೀವರ ಭೇದವೂ ಸಿದ್ಧವಾಯಿತು. 3. ''ನಾನು ಗಡಿಗೆಯಲ್ಲ ಎಂಬ ಅನುಭವದಿಂದ ಜೀವ,ಜಡರ ಭೇದ ಸಿದ್ಧ. 4.ಬೆಣ್ಣೆ ಎಣ್ಣೆಯಲ್ಲ ಎಂಬ ಅನುಭವದಿಂದ ಜಡ,ಜಡಗಳ ಭೇದ ಸಿದ್ಧ . 5. ಜಡ ಪದಾರ್ಥಗಳು ಪರಮಾತ್ಮನಲ್ಲ ಎಂಬ ಅನುಭವದಿಂದ ಜಡ,ಪರಮಾತ್ಮರುಗಳಿಗೆ ಭೇದಸಿದ್ಧ. ಹೀಗೆ ಅನುಭವದಿಂದಲೇ ಸುಪ್ರಸಿದ್ಧವಾದ ಪಂಚ ಭೇದಗಳನ್ನು ಶಾಸ್ತ್ರಗಳು ತಿಳಿಸುವ ಅಗತ್ಯವಿಲ್ಲ.

ಉತ್ತರ:- ಹಿಂದೆಯೇ ವಿವರಿಸಿದಂತೆ, ಸಾಮಾನ್ಯವಾಗಿ ಪಂಚಭೇದಗಳು ಅನುಭವಸಿದ್ಧವಾದರೂ ವಿಶೇಷವಾಗಿ ಪ್ರತ್ಯಕ್ಷಸಿದ್ಧವಲ್ಲ. ಹೇಗೆಂದರೆ- ಯಾರಿಗೂ ಜೀವ,ಪರಮಾತ್ಮರೇ ಪ್ರತ್ಯಕ್ಷರಾಗದಿರುವುದರಿಂದ ಅವರ ಭೇದವೂ ಪ್ರತ್ಯಕ್ಷವಲ್ಲ. 'ನಾನು' ಎಂಬ ಅನುಭವದಿಂದ ಜೀವನು ಸಿದ್ಧನಾದರೂ ಪರಮಾತ್ಮನ ಅನುಭವವಿಲ್ಲದ್ದರಿಂದ ಜೀವ,ಪರಮಾತ್ಮರ ಭೇದವು ಅನುಭವ(ಪ್ರತ್ಯಕ್ಷ) ಸಿದ್ಧವಾಗಲಾರದು. ಪರಮಾತ್ಮನು ಸಚ್ಛಾಸ್ತ್ರಗಳಿಂದ ಮಾತ್ರ ತಿಳಿಯಲ್ಪಡುವುದರಿಂದ, ಸಚ್ಛಾಸ್ತ್ರಗಳ ಮೂಲಕವೇ ಜೀವ,ಪರಮಾತ್ಮರ ವಿಶಿಷ್ಟಭೇದವನ್ನು ತಿಳಿಯಬೇಕು. 2. ಜೀವ, ಜೀವರ ಭೇದವೂ ವಿಶೇಷವಾಗಿ ಪ್ರತ್ಯಕ್ಷಸಿದ್ಧವಲ್ಲ. ಜೀವಾತ್ಮರೇ ಪ್ರತ್ಯಕ್ಷಗೋಚರ ವಾಗದಿರುವಾಗ ಅವರ ಭೇದ ಪ್ರತ್ಯಕ್ಷಸಿದ್ಧವಾಗಲು ಹೇಗೆ ಸಾಧ್ಯ? ನಮಗೆ ಗೋಚರವಾಗುವ ಪಾಂಚಭೌತಿಕಶರೀರಗಳೇ ಜೀವರಲ್ಲ. ಜಡವಾದ ನಶ್ವರಶರೀರಗಳು ಬೇರೆ. ಅದರೊಳಗಿರುವ ಜೀವರು ಬೇರೆ. ಸಾವಿರಾರು ಶರೀರಗಳು ನಮಗೆ ಪ್ರತ್ಯಕ್ಷಸಿದ್ಧವಾದರೂ ಅವುಗಳಲ್ಲಿರುವ ಜೀವರು ನಮಗೆ ಪ್ರತ್ಯಕ್ಷಸಿದ್ಧರಲ್ಲ. ಜೀವರುಗಳೇ ಪ್ರತ್ಯಕ್ಷಸಿದ್ಧರಾಗದಿರುವಾಗ ಅವರಲ್ಲಿರುವ ಭೇದವು ಹೇಗೆ ತಾನೇ ಸಾಧ್ಯ? ಆದ್ದರಿಂದ ಜೀವ,ಜೀವರ ಅಪೂರ್ವವಾದ ವಿಶಿಷ್ಟ ಭೇದವನ್ನೂ ಸಚ್ಛಾಸ್ತ್ರಗಳ ಮೂಲಕವೇ ತಿಳಿಯಬೇಕು. 3.ಅಸಂಖ್ಯ ಜಡವಸ್ತುಗಳು ನಮಗೆ ಪ್ರತ್ಯಕ್ಷಸಿದ್ಧವಾದ್ದರಿಂದ ಅವುಗಳಲ್ಲಿರುವ ಭೇದಗಳೂ ನಮಗೆ ಪ್ರತ್ಯಕ್ಷಸಿದ್ಧ. ಹೀಗೆ ಜಡಜಡಗಳ ಭೇದವು ಪ್ರತ್ಯಕ್ಷದಿಂದಲೇ ಸಿದ್ಧವೆಂಬುದು ಖರೆ. ಆದರೆ ನಾವು ತಿಳಿಯುತ್ತಿರುವುದಷ್ಟೇ ಜಡವಸ್ತುಗಳಲ್ಲ. ನಮ್ಮ ಪ್ರತ್ಯಕ್ಷಕ್ಕೆ ನಿಲುಕದ ಅನಂತವಾದ ಚಿತ್ರವಿಚಿತ್ರವಸ್ತುಗಳಿವೆ. ನೆಲದೊಳಗಿರುವ ಖನಿಜ ಮುಂತಾದ ಅಸಂಖ್ಯವಿಶಿಷ್ಟವಸ್ತುಗಳನ್ನೂ , ಕಡಲೊಳಗಿರುವ ನಾನಾರತ್ನರಾಶಿ ಗಳನ್ನು , ಮೇರು,ಮಂದರ, ಮೊದಲಾದ ಮಹಾಪರ್ವತಗಳನ್ನು, ಸಪ್ತದ್ವೀಪ, ಸಪ್ತಸಾಗರಗಳನ್ನು, ಹದಿನಾಲ್ಕು ಲೋಕಗಳಲ್ಲಿರುವ ಬಗೆಬಗೆಯ ಅತ್ಯದ್ಭುತ ಜಡವಸ್ತುಗಳನ್ನು ತಿಳಿಯಬಲ್ಲವನು ಯಾರು? ಅಲ್ಲದೇ ಪುಣ್ಯ,ಪಾಪ ಮುಂತಾದ ಅತೀಂದ್ರಿಯ ಜಡವಸ್ತು

ಗಳನ್ನು ಪ್ರತ್ಯಕ್ಷದಿಂದ ತಿಳಿಯಲು ಸಾಧ್ಯವಿಲ್ಲ. ಇಂತಹ ಜಡವಸ್ತುಗಳನ್ನು ಶಾಸ್ತ್ರದ ಮೂಲಕವೇ ತಿಳಿಯಬೇಕಾದ್ದರಿಂದ ಅವುಗಳ ವಿಶಿಷ್ಟಭೇದವನ್ನೂ ಶಾಸ್ತ್ರಗಳ ಮೂಲಕವೇ ತಿಳಿಯಬೇಕು. ಹೀಗೆಯೇ ಅತೀಂದ್ರಿಯ ಜಡವಸ್ತು ವಸ್ತುಗಳಿಗೂ ಅತೀಂದ್ರಿಯ ಜೀವರಿಗೂ ಇರುವ ಭೇದವು ಪ್ರತ್ಯಕ್ಷಗೋಚರವಲ್ಲ. ಮತ್ತು ಅತೀಂದ್ರಿಯ ಜಡವಸ್ತುಗಳಿಗೂ ವೇದೈಕವೇದ್ಯನಾದ ಪರಮಾತ್ಮನಿಗೂ ಇರುವ ಭೇದವು ಪ್ರತ್ಯಕ್ಷಗೋಚರವಲ್ಲ. ಹೀಗೆ ಪಂಚವಿಧಭೇದಾತ್ಮಕವಾದ ದ್ವೈತವು ವಿಶಿಷ್ಟಶ್ರೇಷ್ಠತತ್ವವು ವೇದಾದಿಸಚ್ಛಾಸ್ತ್ರಗಳ ಹೊರತು ಇತರ ಯಾವ ಪ್ರಮಾಣಗಳಿಂದಲೂ ತಿಳಿಯಲಸಾಧ್ಯವಾದ್ದರಿಂದ ಅದಕ್ಕೆ ಅಪೂರ್ವತೆ ಇದೆ. ಆದ್ದರಿಂದಲೇ ದ್ವೈತತತ್ತ್ವವು ಸಚ್ಛಾಸ್ತ್ರಗಳ ಮುಖ್ಯತಾತ್ಪರ್ಯವಿಷಯವಾಗಿದೆ. ಚತುರ್ಮುಖಬ್ರಹ್ಮಾದಿಗಳನ್ನು ಒಳಗೊಂಡ ಬ್ರಹ್ಮಾಂಡದ ಹಾಗೂ ಅನಂತ ದೇಶಕಾಲಗಳಲ್ಲಿ ವ್ಯಾಪ್ತಳಾದ ನಿತ್ಯಮುಕ್ತಳಾದ ಲಕ್ಷ್ಮೀದೇವಿಯ ಅತ್ಯಂತಭೇದವು ಶ್ರೀಹರಿಯಲ್ಲಿದೆ. ಶ್ರೀಹರಿಯಸ್ವರೂಪವೇ ಆಗಿರುವ ಈ ಭೇದವು ಅನಂತಸಂಖ್ಯೆಯ ಪೂರ್ಣಸದ್ಗುಣಸಮುದ್ರಗಳಿಂದ ಪರಿಪೂರ್ಣವಾಗಿದೆ. ಇಂತಹ ಸ್ವತಂತ್ರತತ್ತ್ವವಾದ ಭಗವತ್ ಸ್ವರೂಪಭೂತಭೇದದ ಸರ್ವಶ್ರೇಷ್ಠವೈಶಿಷ್ಟ್ಯಗಳನ್ನು ಸಚ್ಛಾಸ್ತ್ರಗಳಮೂಲಕ ವಿಶೇಷವಾಗಿ ತಿಳಿದು ಭಜಿಸುವ ಭಕ್ತಜಿಜ್ಞಾಸುಗಳಿಗೆ ನಿತ್ಯ-ಮುಕ್ತಿಯೆಂಬ ಪರಮಪುರುಷಾರ್ಥಪ್ರಯೋಜನವು ದೊರೆಯುತ್ತದೆ. ಮತ್ತು ರಮಾಬ್ರಹ್ಮಾದಿ ದೇವೋತ್ತಮರ ಸ್ವರೂಪಭೂತವಾದ ಭೇದಗಳನ್ನು ತಿಳಿಯುವುದರ ಜೊತೆಗೆ ಅವರ ತಾರತಮ್ಯಕ್ಕನುಗುಣವಾದ ನಾನಾ ಮಹಿಮಾ ವಿಶೇಷಗಳನ್ನು ಅವರವರ ಸ್ವರೂಪಭೂತಭೇದಗಳಲ್ಲೇ ಅಡಕವಾಗಿವೆಯೆಂದು ತಿಳಿಯಬೇಕು. ಹೀಗೆಯೇ, ಜಗತ್ತಿನ ಎಲ್ಲಾ ವಸ್ತುಗಳನ್ನು ತಿಳಿಯುವಾಗ ಆಯಾ ವಸ್ತುಗಳ ಗುಣ, ಧರ್ಮ, ಆಕೃತಿ ಮುಂತಾದ ವಿಶೇಷವೈಚಿತ್ರ್ಯಗಳನ್ನು ಆಯಾ ವಸ್ತುಗಳಲ್ಲಿರುವ ಭೇದಗಳಲ್ಲೇ ಅಡಕವಾಗಿವೆಯೆಂದು ತಿಳಿಯಬೇಕು. ಮತ್ತು ಈ ಪಂಚಭೇದಾತ್ಮಕ ಪ್ರಪಂಚವೆಲ್ಲವೂ ಯಾವಾಗಲೂ ಸ್ವತಂತ್ರ ತತ್ತ್ವನಾದ ಶ್ರೀಹರಿಗೆ ಅಧೀನವಾಗಿರುತ್ತದೆಯೆಂಬ ಪ್ರಜ್ಞೆಯು ನಮಗೆಲ್ಲರಿಗೂ ನಿರಂತರ ಜಾಗ್ರತವಾಗಿರಬೇಕು. ಇಂತಹ ತಾತ್ವಿಕ ಪರಿಜ್ಞಾನವೂ ಪರಮಪುರುಷಾರ್ಥವೆನಿಸಿದ ಮೋಕ್ಷರೂಪಪ್ರಯೋಜನದ ಪ್ರಾಪ್ತಿಗೆ ಮುಖ್ಯಸೋಪಾನವಾಗಿದೆ. ಆದ್ದರಿಂದ ಇಂತಹ ಪಂಚಭೇದಾತ್ಮಕದ್ವೈತಪ್ರಮೇಯವನ್ನು ಪ್ರಧಾನವಾಗಿ ಪ್ರತಿಪಾದಿಸುವ ಸಚ್ಛಾಸ್ತ್ರಗಳಿಗೆ ಅಪೂರ್ವವಿಷಯ, ಪರಮಪುರುಷಾರ್ಥ ಪ್ರಯೋಜನಗಳಿರುವುದರಿಂದ ಸದ್ಗುಣಸಂಪನ್ನರಾದ ಎಲ್ಲಾ ಸಜ್ಜನವರೇಣ್ಯರ ಪೂರ್ವಮನ್ನಣೆಗೆ ಶಾಸ್ತ್ರಗಳು ಪಾತ್ರವಾಗಿವೆ. ಇದರಿಂದ ಅಭೇದವಾದಿಗಳಾದ ಮಾಯಾವಾದಿಗಳು ಘೋಷಿಸಿದ ದೋಷಗಳು ವಿಶೇಷದ್ವೇಷಮೂಲಕವೆಂದು ಸುಸ್ಪಷ್ಟ.

ಅಲ್ಲದೇ ಅದ್ವೈತವಾದಿಗಳ ಸಿದ್ಧಾಂತಕ್ಕೇ ಅಪೂರ್ವವಿಷಯ, ಹಾಗೂ ಪ್ರಯೋಜನಗಳು ಇಲ್ಲದ್ದರಿಂದ, ಅವರ ಸಿದ್ಧಾಂತ ಸಿದ್ಧಾಂತವೆನಿಸಲು ಸಾಧ್ಯವಿಲ್ಲ. ಅವರು ಶಾಸ್ತ್ರಗಳಿಗೆ ಜೀವ, ಪರಮಾತ್ಮರ ಅಭೇದವೇ(ಅದ್ವೈತವೇ) ವಿಷಯವೆಂದು ನಿರೂಪಿಸುತ್ತಾರೆ. ಈ ಅಭೇದ ಸತ್ಯವೋ? ಸುಳ್ಳೋ? ಸತ್ಯವೆಂದರೆ ಪರಮಾತ್ಮನೊಬ್ಬನೇ ಸತ್ಯವೆನ್ನುವ ಅವರ ಸಿದ್ಧಾಂತಕ್ಕೆ ಭಂಗ ಬರುತ್ತದೆ. ಸುಳ್ಳೆಂದರೆ ಸುಳ್ಳಾದ ವಿಷಯವನ್ನು ಮಂಡಿಸುವ ಸಿದ್ಧಾಂತ ಅಪ್ರಮಾಣವಾಗುತ್ತದೆ. ಅಲ್ಲದೇ ಅಭೇದ ಸುಳ್ಳಾದರೆ ಅಭೇದಕ್ಕೆ ವಿರುದ್ಧವಾದ ಭೇದವನ್ನು ಸತ್ಯವೆಂದು ತಾವೇ ಒಪ್ಪಿಕೊಂಡಂತಾಗುತ್ತದೆ. ಹಾಗಾದರೆ ಸತ್ಯವಾದ ಅಭೇದ ಪರಮಾತ್ಮ ಸ್ವರೂಪವೇ ಎಂದು ಹೇಳುವುದರಿಂದ ಯಾವುದೇ ಬಾಧಕವಿಲ್ಲವೆಂದು ಹೇಳುತ್ತಾರೆ. ಹೀಗೆ ಹೇಳಿದರೆ ಅಭೇದಕ್ಕೆ ಅಪೂರ್ವತೆ ಇಲ್ಲವೆಂದು ಆಗುತ್ತದೆ. ಏಕೆಂದರೆ ಅವರ ಸಿದ್ಧಾಂತದಲ್ಲಿ ಜೀವ, ಪರಮಾತ್ಮರು ಬೇರೆಯಲ್ಲ. ಆದ್ದರಿಂದ ಅಭೇದ ಪರಮಾತ್ಮನ ಸ್ವರೂಪವೆಂದರೆ ಜೀವಾತ್ಮನ ಸ್ವರೂಪವೇ ಎಂದು ಒಪ್ಪಿದಂತೆ. ಆತ್ಮ ಸ್ವಯಂಪ್ರಕಾಶನಾದ್ದರಿಂದ ತನ್ನನ್ನು ತಾನು ನಿರಂತರ ತಿಳಿಯುವಂತೆ ತನ್ನ ಸ್ವರೂಪವೇ ಆದ ಅಭೇದವನ್ನೂ ತಿಳಿಯುತ್ತಾನೆ. ಹೀಗೆ ಅನುಭವಸಿದ್ಧವಾದ ಅಭೇದವನ್ನು ಶಾಸ್ತ್ರಗಳು ಸಾಧಿಸಿದರೆ, ಶಾಸ್ತ್ರಗಳಿಗೆ 'ಸಿದ್ಧಸಾಧನತಾ' ಎಂಬ ದೋಷ ಸಂಭವಿಸುತ್ತದೆ. ಹೀಗೆ ಅಪೂರ್ವತೆಯಿಲ್ಲದ ವಿಷಯವನ್ನು ಅದ್ವೈತಸಿದ್ಧಾಂತ ಪ್ರತಿಪಾದಿಸುವುದರಿಂದ ಅದ್ವೈತಸಿದ್ಧಾಂತವು ವಿಚಾರವಂತರ ಅನಾದರಕ್ಕೆ ಗುರಿಯಾಗಿದೆ. ದ್ವೈತಿಗಳು ಆತ್ಮನಲ್ಲೂ ವಿಶೇಷವೆಂಬ ಶಕ್ತಿಯಿರುವುದೆಂದು ಹೇಳುವುದರಿಂದ ತಾನು ತನಗೆ ಸಿದ್ಧನಾದರೂ ತನ್ನ ಸ್ವರೂಪವೇ ಆದ ಕೆಲವು ಗುಣಧರ್ಮಗಳನ್ನು ತಿಳಿಯುವುದಿಲ್ಲವೆಂದು ಹೇಳಬಹುದು. ಆದರೆ ಅದ್ವೈತಿಗಳು ಆತ್ಮನನ್ನು ನಿರ್ಗುಣ, ನಿರಾಕಾರ, ನಿರ್ವಿಶೇಷನೆಂದು ಆತ್ಮನಲ್ಲಿ ಯಾವುದೇ ಗುಣ, ಧರ್ಮ, ಆಕಾರ, ವಿಶೇಷಗಳನ್ನು ಒಪ್ಪದಿರುವುದರಿಂದ, ತನಗೆ ತಾನು ಸಿದ್ಧನಾದರೂ ತನ್ನ ಸ್ವರೂಪವಾದ ಅಭೇದ ಸಿದ್ಧವಲ್ಲವೆನ್ನಲು ಸಾಧ್ಯವಿಲ್ಲ. ಹೀಗೆ ಅನುಭವದಿಂದ ಸಿದ್ಧವಾಗುವ ಅಭೇದವನ್ನು ಶಾಸ್ತ್ರಗಳು ಸಾಧಿಸಿದರೆ ಶಾಸ್ತ್ರಗಳಿಗೆ ವೈಯರ್ಥ್ಯ ಸಂಭವಿಸುತ್ತದೆ. ಶ್ರುತಿಸ್ಮೃತಿಗಳಲ್ಲಿ ಯಾವ ವಾಕ್ಯವೂ ಅಭೇದವನ್ನು ಬೋಧಿಸುವುದಿಲ್ಲ. ಅದ್ವೈತಿಗಳು ಅಭೇದಸಾಧಕಗಳೆಂದು ಪ್ರತಿಪಾದಿಸುವ ವೇದವಾಕ್ಯಗಳು, ಅಭೇದವನ್ನು ಬೋಧಿಸದೇ ಭೇದವನ್ನೇ ಮುಖ್ಯತಾತ್ಪರ್ಯದಿಂದ ಬೋಧಿಸುತ್ತವೆಂದು ಶ್ರೀಮದಾನಂದತೀರ್ಥರು ವಿಶದವಾಗಿ ಸುಸ್ಪಷ್ಟಪಡಿಸಿದ್ದಾರೆ. ಮತ್ತು ಎಲ್ಲಾ ಸಚ್ಛಾಸ್ತ್ರಗಳೂ ದ್ವೈತವನ್ನೇ ಪ್ರಧಾನವಾಗಿ ಪ್ರತಿಪಾದಿಸುತ್ತವೆಯೆಂದು ವಿವರಿಸಿದ್ದಾರೆ.

ಈ ಅದ್ವೈತಶಾಸ್ತ್ರಕ್ಕೆ ಪ್ರಯೋಜನವೂ ಇಲ್ಲ. ನಿರ್ವಿಶೇಷನಾದ ಪರಮಾತ್ಮನಲ್ಲಿ ಜ್ಞಾನ, ಆನಂದ, ಶಕ್ತಿ ಮುಂತಾದ ಯಾವ ಗುಣವಿಶೇಷಗಳೂ ಇಲ್ಲ. ಆದ್ದರಿಂದ ಅದ್ವೈತಿಗಳ ಬ್ರಹ್ಮನಿಗೂ ಬೌದ್ಧರ ಶೂನ್ಯಭಾವಕ್ಕೂ ಯಾವ ರೀತಿಯಿಂದಲೂ ವ್ಯತ್ಯಾಸವಿಲ್ಲ. ಅದ್ವೈತಸಿದ್ಧಾಂತದಂತೆ ಮೋಕ್ಷ ದೊರೆಯುವುದೆಂದರೆ ಶೂನ್ಯಸ್ವರೂಪನಾದ ಪರಮಾತ್ಮನಿಗೆ ನಮ್ಮಲ್ಲಿರುವ ಜ್ಞಾನ, ಆನಂದ, ಸಾಮರ್ಥ್ಯಗಳನ್ನು ಕಳೆದು ಕೊಳ್ಳುವುದು ಎಂದರ್ಥ. ಇಂತಹ ಮೋಕ್ಷಪ್ರಯೋಜನಕ್ಕಿಂತ ನಾವು ಸಂಸಾರದಲ್ಲಿರುವುದೇ ವಾಸಿ. ನಮಗೆ ಇಲ್ಲಿ ತಾತ್ಕಾಲಿಕಸುಖವಾದರೂ ದೊರೆಯುತ್ತದೆ. ಕೆಲವಾದರೂ ಗುಣಗಳಿರುತ್ತವೆ. ಆ ಅದ್ವೈತಬ್ರಹ್ಮ ಸಂಸಾರಿಗಳಿಗಿಂತಲೂ ಬಹು ಹೀನಸ್ಥಿತಿಯಲ್ಲಿದ್ದಾನೆ. ಇಂತಹ ಮೋಕ್ಷಪದವಿಯನ್ನು ಶಂಕರಾಚಾರ್ಯರೇ ತಮ್ಮ ಅಭಿಮಾನಿ ಸಂಘದೊಂದಿಗೆ ಹಂಚಿಕೊಳ್ಳಲಿ. ನಾವು ಇಂತಹ ನಿರ್ಗುಣನಿರಾಕಾರಬ್ರಹ್ಮನಾಗುವುದಕ್ಕಿಂತ ಅನಂತಗುಣಪರಿಪೂರ್ಣನಾದ ವಿಷ್ಣುವಿನ ದಾಸಪರಂಪರೆಯ ಧನ್ಯದಾಸ್ಯಪದವಿಯಿಂದಲೇ ಮಾನ್ಯರಾಗೋಣ. ಈ ಅದ್ವೈತದ ನಿರಾಕಾರ ಬ್ರಹ್ಮನ ಉಪಾಸನೆಯಿಂದ ನಿತ್ಯನರಕವಾದ ಘೋರತಮೋಲೋಕವೇ ಸಂಭವಿಸುತ್ತದೆ. ಏಕೆಂದರೆ, ಉಪನಿಷತ್ತುಗಳು ಪರಮಾತ್ಮನನ್ನು 'ಜ್ಯೋತಿರ್ಮಯ' ಅಂದರೆ 'ದಿವ್ಯತೇಜಸ್ಸಿನ ಆಕಾರದವನು' ಎಂದು ಘೋಷಿಸುತ್ತವೆ. ಅದ್ವೈತಿಗಳು ಪರಮಾತ್ಮನು ನಿರಾಕಾರನಾದ್ದರಿಂದ ಅವನಿಗೆ ಈ ತೇಜೋರೂಪದ ಆಕಾರವೂ ಇಲ್ಲವೆನ್ನುತ್ತಾರೆ. ಹೀಗೆ ತೇಜಸ್ಸಿನ ಆಕಾರವನ್ನು ನಿಷೇಧಿಸಿದರೆ ತೇಜಸ್ಸಿಗೆ ವಿರುದ್ಧವಾದ ಕತ್ತಲೆಯ ಆಕಾರವನ್ನು ಪರಮಾತ್ಮನಿಗೆ ಒಪ್ಪಬೇಕಾಗುತ್ತದೆ. ಇಂತಹ ಕತ್ತಲೆಯ ಸ್ವರೂಪನ್ನು ಉಪಾಸನೆ ಮಾಡಿದರೆ ಕತ್ತಲೆಯ ಲೋಕವಾದ ನಿತ್ಯನರಕ ದೊರಯಬೇಕಲ್ಲವೇ?

ನಿರ್ದುಷ್ಟಪ್ರತ್ಯಕ್ಷ ಹಾಗೂ ಅನಂತವೇದ, ವೇದಾಂತಗಳೇ ಮುಂತಾದ ಅನಂತಪ್ರಮಾಣಗಳಿಂದ ಪ್ರಮಿತವಾದ ಈ ಪಾಂಚಭೌತಿಕಪ್ರಪಂಚವನ್ನೇ, ಅದ್ವೈತವಾದಿಗಳು ಅನೇಕ ಭ್ರಾಮಕನಿದರ್ಶನಗಳನ್ನು ಪ್ರದರ್ಶಿಸಿ ಶುದ್ಧಾಂಗಸುಳ್ಳೆಂದು ಕಲ್ಪಿಸುವುದು ಹಗಲು ದರೋಡೆಯಾಗಿದೆಯೆಂದು ಶ್ರೀಮನ್ಮಧ್ವಾಚಾರ್ಯರು ನಿರೂಪಿಸಿದ್ದಾರೆ. ''ಯಚ್ಚ ಪ್ರಮಾಣದೃಷ್ಟಾನಾಮಪಿ ಪದಾರ್ಥಾನಾಂ ಮಿಥ್ಯಾತ್ವಕಲ್ಪನಂ ತಚ್ಚ ಪ್ರಮಾಣವಿರುದ್ಧತ್ವಾದೇವ ಪ್ರಕಾಶತಸ್ಕರಮ್'' ಆದ್ದರಿಂದ ಸಾತ್ತ್ವಿಕ ತತ್ತ್ವವಾದಿಗಳೆಲ್ಲರೂ ಶಂಕರಾಚಾರ್ಯರನ್ನು ಚೋರಚಕ್ರವರ್ತಿಯಾದ ಮಹಾಚೋರರೆಂದು ತಿರಸ್ಕರಿಸಿದ್ದರೆಂದು ಶ್ರೀಮನ್ನಾರಾಯಣಪಂಡಿತಾಚಾರ್ಯರು ತಿಳಿಸುತ್ತಾರೆ--'' ಅಚೂಚರದ್ ವೇದಸಮೂಹವಾಹಂ ತತೋ ಮಹಾತಸ್ಕರ-ಮೇನಮಾಹುಃ ''ಎಂದು. ಆದ್ದರಿಂದ ಬುದ್ಧಿದೋಷ, ದೃಷ್ಟಿದೋಷಗಳಿಂದ ದುಷ್ಟವಾಗಿ ಪ್ರತ್ಯಕ್ಷಾಭಾಸವೆನಿಸಿದ ದೃಷ್ಟಾಂತಗಳಿಂದ, ನಿರ್ದುಷ್ಟಪ್ರತ್ಯಕ್ಷಪ್ರಮಾಣಗಳಿಂದ ಪ್ರಮಿತವಾದ ಪ್ರಪಂಚವನ್ನು ಸುಳ್ಳೆಂದು ಸಾಧಿಸಲು ಸಾಧ್ಯವಿಲ್ಲ. ಅದ್ವೈತಿಗಳು ಮುಖ್ಯವಾಗಿ ಉದಾಹರಿಸುವ ಸ್ವಪ್ನದ ಬಗ್ಗೆ ಶ್ರೀಮನ್ಮಧ್ವಾಚಾರ್ಯರು ವಿಶದವಾಗಿ ವಿಮರ್ಶಿಸಿದ್ದಾರೆ. ಅದ್ವೈತಿಗಳು ಹೇಳುವಂತೆ ಸ್ವಪ್ನವು ಪೂರ್ಣವಾಗಿ ಭ್ರಮೆಯಲ್ಲವೆಂದೂ, ಬಾಹ್ಯತ್ವಜ್ಞಾನ ಮುಂತಾದ ಕೆಲವು ಅಂಶಗಳು ಮಾತ್ರ ಭ್ರಮೆಯೆಂದೂ ಸ್ವಪ್ನನಿಯಾಮಕನು ಭಗವಂತನೇ ಎಂದೂ, ನಮ್ಮ ನಮ್ಮ ಸಂಸ್ಕಾರಪರಿಣಾಮರೂಪವಾದ ಸ್ವಪ್ನವಸ್ತುಗಳೆಲ್ಲವೂ ಸತ್ಯವೆಂದೂ ಸ್ಪಷ್ಟಪಡಿಸಿದ್ದಾರೆ. ಇನ್ನು ''ಮಮೈವಾಂಶೀ ಜೀವಲೋಕೇ ಜೀವಭೂತಃ ಸನಾತನಃ '' ಎಂಬ ಶ್ರೀಕೃಷ್ಣನಮಾತಿಗೆ ಜೀವರೆಲ್ಲ ಶ್ರೀಕೃಷ್ಣನ ಸಾಕ್ಷಾತ್ ಅಂಶರೆಂದರ್ಥವಲ್ಲ. ಭಗವಂತನು ಜ್ಞಾನಾನಂದಾದಿಗಳ ಸ್ವರೂಪನಾಗಿರುವಂತೆ ಜೀವರೂ, ಜ್ಞಾನ, ಆನಂದಾದಿ ಸ್ವರೂಪರು ಎಂಬ ಸಾದೃಶ್ಯದಿಂದ ಅಂಶಾಭಾಸರು ಎಂದರ್ಥ. ಸೂರ್ಯನಂತೆ ಮಿಣುಕು ಹುಳುವೂ ಬೆಳಕಿನ ಸ್ವರೂಪವಾದ್ದರಿಂದ ಸೂರ್ಯನ ಅಂಶವೆಂದು ಹೇಳಿದಂತೆ.

❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉❉

॥ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು.॥